the Act was unworkable as it did not provide for some machinery or adjudicate the forum for resolution of dispute arising from the Act particularly Sections 5,6 and 7. The matter is now pending before the Supreme Court in Civil Appeal No...../74 of 1982 and likely to be listed for final hearing shorly. Therefore, it is considered necessary to amend the Act to provide for making application to the Tribunal constituted under Section 12 in respect of disputes, arising from Sections 5,6 and 7. What is there to discuss about?

12.20 ಪಿ.ಎಂ.

ಪ್ರಸ್ತಾವನೆ ಅಂಗೀಕಾರ

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ವಿಧೇಯಕವನ್ನು ಅಂಗೀಕರಿಸಲು ಕೋರುತ್ತೇನೆ.

ಅಧ್ಯಕ್ಷರು : 1995ರ ಕರ್ನಾಟಕ ವಿದ್ಯುತ್ ಸರಬರಾಜು ಉದ್ಯಮಗಳ (ಅರ್ಜನ್) ತಿದ್ದುಪಡಿ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು. ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 1995

(ಪರ್ಯಾಲೋಚನೆ ಪ್ರಸ್ತಾಪ)

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಅಧ್ಯಕ್ಷರೇ, 1995ರ ಕರ್ನಾಟಕ ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೇ, ಈಗಾಗಲೇ ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳನ್ನು ನಡೆಸುವ ಸಂದರ್ಭದಲ್ಲಿ ಒಂದು ಸುಗ್ರೀವಾಜ್ಞೆ ಹೊರಡಿಸಿ ಹಿಂದುಳಿದ ಜನಾಂಗಗಳು ಯಾವುವು ಎಂದು ಪಟ್ಟಿಯನ್ನು ಗುರುತಿಸಿ ಅದಕ್ಕೆ (ಅ) ವರ್ಗ ಮತ್ತು (ಬಿ) ವರ್ಗ ಎಂದು ಎರಡು ಪ್ರಭೇದ ಮಾಡಿ (ಅ) ವರ್ಗದವರಿಗೆ ಶೇಕಡ 80 ರಷ್ಟು ಮೀಸಲಾತಿ ಮತ್ತು (ಬಿ) ವರ್ಗದವರಿಗೆ ಶೇಕಡ 20 ರಷ್ಟು ಮೀಸಲಾತಿ ತಂದಿದ್ದೆವು ಅದರ ಪ್ರಕಾರ ಈಗಾಗಲೇ ಚುನಾವಣೆ ಆಗಿದೆ. ಆ ಕಾರಣಕ್ಕಾಗಿ ಇದನ್ನು ಈ ಸದನ ಒಪ್ಪಿಕೊಳ್ಳಬೇಕು, ಆ ಸುಗ್ರೀವಾಜ್ಞೆ ಬದಲು ಈಗ ವಿಧೇಯಕವನ್ನು ಸಭೆಯ ಮುಂದೆ ತಂದಿದ್ದೇವೆ. ಮತ್ತೆ ಮಾನ್ಯ ಉಪಾಧ್ಯಕ್ಷರೇ ಒಂದು ಸಣ್ಣ ಮುದ್ರಣದ ದೋಷವಾಗಿದೆ, ಇದರಲ್ಲಿ (ಅ) ವರ್ಗದಲ್ಲಿ ಅಕಸ್ಮಾತ್ ಸಿಗದೇ ಹೋದಾಗ (ಬಿ) ವರ್ಗದಿಂದಿರುವವರನ್ನು ಪದಾಧಿಕಾರಿಗಳನ್ನು ಮಾಡಬಹುದು ಅಥವಾ (ಬಿ) ವರ್ಗದಲ್ಲಿರುವಂಥವರನ್ನು (ಅ) ವರ್ಗದಲ್ಲಿ ಮಾಡಬಹುದೆಂದು ಇಂಗ್ಲೀಷಿನ ವಿಧೇಯಕದಲ್ಲಿ ಸೆಷನ್4ರ ಕೆಳಗೆ ಕಾಣಿಸಿದೆ.

"provided further that if no person falling under category 'A' is available, the offices reserved for that category shall also be filled by the persons falling under category "B" and vice versa."

ಎನ್ನುವುದರಲ್ಲಿ, ಕನ್ನಡದ ಮುದ್ರಣದಲ್ಲಿ ಕಲಂ 4ರಲ್ಲಿ ಕಾಣಿಸಿರುವುದರಲ್ಲಿ ಪರಂತು ಇವರನ್ನು ಸೇರಿಸಲಾಗಿದೆ ಎಂಬ ಇಡೀ ಪ್ಯಾರ ಬಿಟ್ಟುಹೋಗಿದೆ, ಅದರ ಒಂದು ಮುದ್ರಣದ ದೋಷ, ಈಗ ಅದನ್ನು ಸರಿಪಡಿಸುತ್ತೇವೆ ಇದನ್ನು ತಮ್ಮ ಅವಗಾಹನೆಗಾಗಿ ತಂದಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಅಧ್ಯಕ್ಷರೇ, ಗ್ರಾಮಪಂಚಾಯಿತಿಯ ವಿಧೇಯಕದಲ್ಲಿ ಹಿಂದುಳಿದ ವರ್ಗದ ಜನರಿಗೆ ಮೂರನೇ ಒಂದು ಭಾಗದ ಮೀಸಲಾತಿಯನ್ನು ಕಲ್ಪಿಸಿಕೊಡಲಾಗಿದೆ, ಆ ರೀತಿ ಕಲ್ಪಿಸಿಕೊಡುವಾಗ ರಾಜ್ಯಸರ್ಕಾರಗಳು ಆಗಿಂದಾಗ್ಗೆ ಪ್ರಕಟಿಸಬಹುದಾದ ಮೀಸಲಾತಿ ವ್ಯಾಪ್ತಿಯಲ್ಲಿ ಬರುವ ಹಿಂದುಳಿದ ವರ್ಗದವರಿಗೆ ಈ ಮೀಸಲಾತಿ ಸೌಲಭ್ಯ ಸಿಗಬೇಕಾದ ಅವಶ್ಯಕತೆ ಇದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹಿಂದಿನ ಸರ್ಕಾರ ಹೊರಡಿಸಿದ್ದ ಮೀಸಲಾತಿ ಆಜ್ಞೆಯಲ್ಲಿ ಮೊದಲನೇ ವರ್ಗ, ಎರಡನೇ ವರ್ಗ ಮತ್ತು ಮೂರನೇ ವರ್ಗಗಳೆಂದು ವಿಂಗಡಿಸಲಾಗಿದೆ. ಆದ್ದರಿಂದ ಆ ಮೀಸಲಾತಿ ನಾವು ನಿರ್ಧಾರ ಮಾಡಿರುವ ಉದ್ದೇಶ ರಾಜ್ಯಾಂಗದ 15(4) ಮತ್ತು 16(4)ನೇ ವಿಧೇಯಕಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಅದನ್ನು ಜಾರಿಗೆ ತಂದ ಆಜ್ಞೆ ಮತ್ತು ಅದಕ್ಕೊಂದು ಕಾನೂನು ಕೂಡ ತರಲಾಗಿದೆ. ಅದನ್ನು ಬಳಸಿಕೊಂಡು ಹಿಂದುಳಿದ ವರ್ಗದ ಜನರಿಗೆ ಮೂರನೆಯ ಒಂದು ಭಾಗದ ಮೀಸಲಾತಿ ಸಿಗಬೇಕಾಗಿದೆಯೋ ಇದರಲ್ಲಿ ಶೇಕಡ 80 ಭಾಗವನ್ನು ನಿಜವಾದ ಹಿಂದುಳಿದವರಿಗೆ ಕೊಟ್ಟು ಇನ್ನು 20 ಭಾಗವನ್ನು ಸಮಾಜದ ಮುಂದುವರಿದ ವರ್ಗದವರೇ ತೆಗೆದುಕೊಂಡಿರುವುದು. ಇದರಲ್ಲಿ ಜಾಣತನವನ್ನು ಮಾಡಿದ್ದಾರೆ. ವಸ್ತು ಸ್ಥಿತಿಯಲ್ಲಿ ನಾವು ಹಿಂದುಳಿದ ವರ್ಗದದ ಜನರನ್ನು ಗುರುತಿಸಿವ ಪಟ್ಟಿಯನ್ನು ಈ ಕಾನೂನಿಗೆ ಪ್ರತ್ಯೇಕವಾಗಿ ನಾವು ಮಾಡಬೇಕು.

ಆ ಕೆಲಸ ಮಾಡುವಾಗ ಹಿಂದೆ ಜಾರಿಯಲ್ಲಿದ್ದ ಹಿಂದುಳಿದ ವರ್ಗದ ಪಟ್ಟಿ ಅನುಕೂಲಕರವಾಗಿದ್ದರೆ ಅದನ್ನು ಕೂಡ ಗಮನಕ್ಕೆ ತೆಗೆದುಕೊಳ್ಳಬಹುದು, ಇಲ್ಲವಾದರೆ ಪ್ರತ್ಯೇಕವಾದ ಪಟ್ಟಿಯನ್ನು ಮಾಡಲೂ ಅವಕಾಶವಿದೆ. ಇದರಲ್ಲಿ ಮೀಸಲಾತಿ ಮಾಡುವ ಉದ್ದೇಶ ಏನೆಂದರೆ ರಾಜ್ಯಾಂಗದ 15(4) ಕಲಮಿನಲ್ಲಿ ಏನು ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿರುವ ವರ್ಗಗಳನ್ನು ಗುರುತಿಸುವ ಉದ್ದೇಶ ಏನಿದೆ, ಆ ಉದ್ದೇಶ ಇಲ್ಲಿ ಬರುವುದಿಲ್ಲ. ಇಲ್ಲಿ ನಿಜವಾಗಿಯೂ ಸಾಮಾಜಿಕವಾಗಿ ಹಿಂದುಳಿದ ವರ್ಗದವರಿಗೆ ನಾವು ಕೊಡಬೇಕಾಗಿದೆ. ನೀವು ನಿಜವಾಗಿ ಮೂರನೇ ಒಂದು ಭಾಗದ ಮೀಸಲಾತಿ ಕೊಡುವಾಗ, ನಾವೇನು ಹಿಂದಿನ ಮೀಸಲಾತಿ ಆಜ್ಞೆಯಲ್ಲಿ ಮೊದಲನೇ ವರ್ಗ ಮತ್ತು ಎರಡನೇ ವರ್ಗಗಳಿಗೆ ಮಾತ್ರ ಸೀಮಿತಗೊಳಿಸಬೇಕಾಗಿತ್ತು. ಅದರಲ್ಲಿ 20 ಭಾಗವನ್ನು ತೆಗೆದು ನೀವು ಒಕ್ಕಲಿಗರಿಗೆ ಲಿಂಗಾಯಿತರಿಗೆ ತತ್ಸಂಬಂಧ ಜಾತಿಯವರಿಗೆ ಕೊಟ್ಟಿರುವುದು ನಿಜವಾಗಿ ಹಿಂದುಳಿದ ವರ್ಗಕ್ಕೆ ಸಿಗಬೇಕಾದ ಸೌಲಭ್ಯ ತಾವು ಕಿತ್ತುಕೊಂಡಿದ್ದೀರಿ, ಇದು ಸಾಧುವಾದ ಕೆಲಸವಲ್ಲ. ಆದ್ದರಿಂದ ಇದನ್ನು ಜಾರಿಗೆ ಕೊಟ್ಟಿದ್ದೀರಿ, ಈಗಾಗಲೇ ಚುನಾವಣೆಗಳೂ ನಡೆದುಹೋಗಿವೆ. ಈಗಾಲಾದರೂ ಸ್ವಲ್ಪ ಆಲೋಚನೆ ಮಾಡಿ, ಮತ್ತೆ ವಿಚಾರ ಮಾಡಬೇಕಾದ ಅಗತ್ಯ ಇದೆ. ಏಕೆಂದರೆ ಹಿಂದಿನ ಸರ್ಕಾರ ತಂದಿದ್ದ ಆಜ್ಞೆಯನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುವ ಪ್ರಯತ್ನ ಏನು ನಡೆದಿದೆ ಇದನ್ನು ನಾನು ತೀವ್ರವಾಗಿ ವಿರೋಧಿಸುತ್ತೇನೆ. ಆದ್ದರಿಂದ ಈ ಪಂಚಾಯಿತಿ ರಾಜ್ಯದ ವಿಧೇಯಕರ ಅಂಗವಾಗಿ ಏನು ಮೀಸಲಾತಿ ನಾವು ಗುರುತಿಸ ಬೇಕೋ ಅದನ್ನು ನಾವು ಪ್ರತ್ಯೇಕವಾಗಿ ಮಾಡಿಕೊಂಡು, ರಾಜಕೀಯ ಮೀಸಲಾತಿ ಯಾರಿಗೆ ಸಿಗುವುದಿಲ್ಲ, ಯಾರಿಗೆ ಸಿಕ್ಕಿದೆ, ಯಾರಿಗೆ ಸಿಗಬೇಕು, ಯಾರನ್ನು ಗಮನದಲ್ಲಿಟ್ಟುಕೊಂಡು ಈ ವಿಧೇಯಕದಲ್ಲಿ ಹೇಳಿದ್ದೇನೆ, ಅದನ್ನು ಅಂತಃಕರಣ ಶುದ್ಧಿಯಿಂದ ನೋಡಬೇಕಾದ ಅಗತ್ಯ ಇವತ್ತಿದೆ. ಯಾರು ನಿಜವಾದ ಹಿಂದುಳಿದ

ವರ್ಗದವರಿಗೆ ಮೂರನೇ ಒಂದು ಭಾಗ ಮೀಸಲಾತಿಯ ರಾಜಕೀಯ ಸೌಲಭ್ಯ ಸಿಗಬೇಕಾಗಿತ್ತೋ, ಈ ಸೌಲಭ್ಯದಿಂದ ಅವರು ವಂಚಿತರಾಗಿದ್ದಾರೆ ಇದಕ್ಕೆ ಕಾರಣವೇನೆಂದರೆ ಈ ಸರ್ಕಾರ ಅವರಿಗೆ ಮೀಸಲಾಗಿದ್ದ ಶೇಕಡ 20ನ್ನು ತೆಗೆದು ನೀವು ಮುಂದುವರಿದ ಜನಾಂಗಕ್ಕೆ ಕೊಟ್ಟಿರುವುದು ಸಾಧುವಾದುದಲ್ಲ. ಆದ್ದರಿಂದ ನೀವು ಆರ್ಟಿಕಲ್ 15(4) 16(4)ರ ಹಿಂದಿದ್ದ ವೈಚಾರಿಕ ಸೈದ್ಧಾಂತಿಕ ಹಿನ್ನಲೆಗೂ ಮತ್ತು ರಾಜಕೀಯ ಮೀಸಲಾತಿ ಕೊಟ್ಟಿದ್ದಕ್ಕೂ ವ್ಯತ್ಯಾಸ ಇದೆ. ಆದ್ದರಿಂದ ಈಗಲಾದರೂ ಸರ್ಕಾರ ಇದನ್ನು ಸರಾಂಬರಿಸಿ, ಶೇಕಡ 20ನ್ನು ನಿಗದಿಮಾಡಿದ್ದಿರಲ್ಲ ಇದನ್ನು ದಯವಿಟ್ಟು ಕಿತ್ತುಹಾಕಬೇಕು, ಈ 20 ಅನ್ನು ಕೂಡ ಆ ವರ್ಗಕ್ಕೆ ಸೇರಿಸಿ, ಆ ವರ್ಗಕ್ಕೇ ಮೂರನೆಯ ಒಂದು ಬಾಗದ ಮೀಸಲಾತಿ ಕೊಡುವ ಬಗ್ಗೆ ಕಾನೂನಿನಲ್ಲಿ ಬದಲಾವಣೆ ತರಬೇಕಾದ • ಅಗತ್ಯ ಇದೆ. ದಯವಿಟ್ಟು ನಿಜವಾದ ಹಿಂದುಳಿದವರಿಗೆ ಇಟ್ಟಂಥ ಮೀಸಲಾತಿಯ ವ್ಯವಸ್ಥೆ ಏನಿದೆ, ಇದನ್ನು ಪ್ರಬಲ ವರ್ಗ ಕೋಮಿನವರು ಶಕ್ತಿಶಾಲಿಗಳು ಕಿತ್ತು ಕೊಳ್ಳುವ ಪ್ರಯತ್ನ ಮಾಡಕೂಡದು. ನಿಮಗೆ ಅಧಿಕಾರ ಸಿಕ್ಕಿದೆ ಎನ್ನುವ ಕಾರಣಕ್ಕಾಗಿ ನಿಮಗೆ ಕೊಟ್ಟ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುವ ಪ್ರಯತ್ನ ಖಂಡಿತ ಸರ್ಕಾರ ಮಾಡಬಾರದು. ಈಗಲಾದರೂ ಇದನ್ನು ಮತ್ತೊಮ್ಮೆ ಪರಿಶೀಲಿಸಿ, ಯಾವ ಸಾಮಾಜಿಕ ನ್ಯಾಯವನ್ನು ನಿಜವಾದ ಹಿಂದುಳಿದ ಜನರಿಗೆ ಕೊಡಬೇಕೋ ಅವರಿಗೇ ಕೊಡುವ ಕೆಲಸ, ಸರ್ಕಾರ ಮಾಡಬೇಕೆಂದು ಒತ್ತಾಯಿಸುತ್ತೇನೆ. ಸರ್ಕಾರ ತಂದಿರುವ ಈ ನೀತಿಯ ಬಗ್ಗೆ ಸಂಪೂರ್ಣ ವಿರೋಧ ವ್ಯಕ್ತ ಪಡಿಸುತ್ತೇನೆ.

ಶ್ರೀ ವೈ. ರಾಮಕೃಷ್ಣ : ಉಪಾಧ್ಯಕ್ಷರೇ, (ಅ) ವರ್ಗ ಮತ್ತು (ಬಿ) ವರ್ಗ ಎಂದು ಏನು ಹೇಳಿದ್ದೀರಿ ಅದಕ್ಕೆಷ್ಟು ಮೀಸಲಾತಿ ಇಟ್ಟಿದ್ದೀರಿ ಅದು ಆರ್ಬಿಟ್ರರಿ ಅಂತ ಕಾಣುತ್ತದೆ. ಏಕೆಂದರೆ ಯಾವ ಮಾನದಂಡ ಉಪಯೋಗಿಸಿ ತಾವು ಶೇಕಡ ಇಟ್ಟಿದ್ದೀರೆಂಬುದನ್ನು ನಮಗೆ ಹೇಳಿದರೆ, ನಮಗೆ ವಾದ ಮಂಡಿಸಲು ಅನುಕೂಲವಾಗುತ್ತದೆ. ಸುಮ್ಮನೆ ಮುಂಗುಂ ಆಗಿ 80 ಪರ್ಸೆಂಟ್ 20 ಪರ್ಸೆಂಟ್, ಎಕ್ಸ್‌ಪ್ಲೇನೇಶನ್ ಆದರೂ ಹೇಳಬಹುದಾಗಿತ್ತು ಅದರಲ್ಲೂ ತಾವು ಹೇಳಲಿಲ್ಲ. ನಮಗಿದು ಅಸ್ಪಷ್ಟವಾಗಿದೆ. ಆರ್ಟಿಕಲ್ 15(4) ಮತ್ತು 16(4) ಅದರಲ್ಲಿ ಯಾವ ಸ್ಪಿರಿಟಿದೆ ಅದನ್ನು ತಾವು ಇಲ್ಲಿ ತಂದಂತೆ ಕಾಣುವುದಿಲ್ಲ. ಇದನ್ನು ರಾಜಕೀಯವಾಗಿ ಬಳಸಿಕೊಳ್ಳುವುದಕ್ಕೆ ತಂದಿದ್ದೀರಿ ಎಂದು ಸ್ಪಷ್ಟವಾಗುತ್ತದೆ. ಅದಕ್ಕೋಸ್ಕರ ಇವತ್ತು ನೀವು ಯಾವ ಮಾನದಂಡವನ್ನು ಉಪಯೋಗಿಸಿದ್ದೀರಿ, Which is the criterin you have followed to fix this 80% or 20%?

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಉಪಾಧ್ಯಕ್ಷರೇ, ನಮ್ಮ ಪಂಚಾಯತ್ ರಾಜ್ ಸಚಿವರು ಈ ಬಿಲ್ಲನ್ನು ಮಂಡಿಸಿದ್ದಾರೆ. ನಾನಂತೂ ಈ ಬಿಲ್ಲಿಗೆ ಸಂಪೂರ್ಣವಾಗಿ ನನ್ನ ವಿರೋಧವನ್ನು ವ್ಯಕ್ತಪಡಿಸುವುದಕ್ಕೆ ಇಚ್ಛಿಪಡುತ್ತೇನೆ. ಅಧ್ಯಕ್ಷ ಸ್ಥಾನಕ್ಕೆ, ಉಪಾಧ್ಯಕ್ಷ ಸ್ಥಾನಕ್ಕೆಕ ರಿಸರ್ವೇಷನನ್ನು ತಂದಿರುವುದು, ಅಧಿಕಾರಕ್ಕಾಗಿ. ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಒಂದೆರಡು ಕಡೆ ಎನ್.ಟಿ. ಅಧ್ಯಕ್ಷ ಸ್ಥಾನ ಮೀಸಲಾತಿಗೆ ಪಂಚಾಯಿತಿ ಲೆವೆಲ್‌ನಲ್ಲಿ ತಂದಿದ್ದಾರೆ. ಕಾಂಗ್ರೆಸ್‌ನವರೇ ಮಾಡಿರುವುದು. ಮತ್ತೆ ನಾನು ಕಾಂಗ್ರೆಸ್‌ನವರು ಮಾಡಿರುವುದೂ ಸರಿಯಲ್ಲ ಎಂದು ಹೇಳುತ್ತಿದ್ದೇನೆ. ನಾನು ಆ ಪಕ್ಷದ ಸದಸ್ಯನಾಗಿದ್ದೆ, ಇವತ್ತು ಹೇಳಿತ್ತಿದ್ದೇನೆ, ಅವತ್ತೂ ನಾನು ಹೇಳಿದ್ದೇನೆ. ಆಗ ನಮ್ಮದೇನೂ ನಡೆಯುತ್ತಿರಲಿಲ್ಲ. ನಾವು ವಿರೋಧ ಮಾಡಿದ್ದಕ್ಕೆ ನಮ್ಮನ್ನು ತೆಗೆದು ಹೊರಗಡೆ ಹಾಕಿದರೇ ಹೊರತು ಬೇರೇನೂ ಅಲ್ಲ. ಅದು ಮೊಯಿಲಿಯವರ ಕಾಲ. ಆದ್ದರಿಂದ ಈ ಪೊಲಿಟಿಕಲ್ ರಿಸರ್ವೇಷನ್ ಏನು ಇದೆ, ಇದು ಸರಿಯಲ್ಲ. ನಾನು ಎ.ಬಿ.ಸಿ. ವರ್ಗಗಳ ಬಗ್ಗೆ ವಾದ ಮಾಡುವುದಕ್ಕೆ ತಯಾರಿಲ್ಲ. ವಿಚಾರ ಮಂಡನೆ ಮಾಡುವುದಕ್ಕೆ ತಯಾರಿಲ್ಲ. ಮೆಂಬರ್ಸ್‌ಗೆ ಅಲ್ಲಿಗೆ

ಬರಲಿಕ್ಕೆ ಅವರಿಗೂ ಒಂದು ಅವಕಾಶ ಸಿಗಬೇಕು. ಅದು ಎ. ಆಗಿರಬಹುದು, ಬಿ. ಆಗಿರಬಹುದು, ಸಿ. ಆಗಿರಬಹುದು, ಸ್ವಲ್ಪ ಮಟ್ಟಿಗೆ ಅವರಿಗೆ ಒಂದು ಅವಕಾಶ ಸಿಗಬೇಕು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಒಂದು ಅಧ್ಯಕ್ಷ ಸ್ಥಾನಕ್ಕೆ, ಉಪಾಧ್ಯಕ್ಷ ಸ್ಥಾನಕ್ಕೆ ಏನು ಇದನ್ನು ಮಂಡಿಸಿದ್ದಾರೆ ಇದರಿಂದ ಅವರಿಗಂತೂ ಒಳ್ಳೆಯದು ಆಗುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಸೆಕ್ರೆಟರಿಗಳು ಚೀಫ್ ಸೆಕ್ರೆಟರಿಯಾಗಿರಬಹುದು ಇವತ್ತು ಅವರೇ ಪ್ರಾಧಾನರಾಗುತ್ತಾರೆ. ಅವರೇ ಅಧ್ಯಕ್ಷರಾಗುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ : ನಮ್ಮ ರಾಜ್ಯಾಂಗದಲ್ಲಿ ತಿದ್ದುಪಡಿ ಮಾಡುವ ಸಂದರ್ಭದಲ್ಲಿ ಈ ಮೀಸಲಾತಿಯನ್ನು ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗತಕ್ಕಂಥ ಸಂದರ್ಭದಲ್ಲಿ ವಿಸ್ತರಿಸಬೇಕು ಎನ್ನುವ ಕಾರಣಕ್ಕಾಗಿ ಕಾನೂನಿನಲ್ಲಿ ಅದನ್ನು ಅಳವಡಿಸಿದೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೇ, ಮೇಲ್ವರ್ಗದವರ ಪರಿಸ್ಥಿತಿಯೇನಾಗಬೇಕು? ನಾವು ಯಾರನ್ನು ತುಳಿಯಬೇಕೆಂದು ಏನೂ ಇಲ್ಲ. ಸದಸ್ಯರದು ಆಯಿತು, ಎಸ್.ಟಿ. ಯವರಿಗೂ ಕೊಟ್ಟೆವು, ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೂ ಕೊಟ್ಟೆವು, ವಿದ್ಯಾಭ್ಯಾಸಕ್ಕೆ ಮತ್ತೊಂದಕ್ಕೆ ಎಲ್ಲಾ ಇದೆ. ಆದರೆ ಅಧ್ಯಕ್ಷಸ್ಥಾನ, ಉಪಾಧ್ಯಕ್ಷಸ್ಥಾನಕ್ಕೆ ಪೊಲಿಟಿಕಲ್ ರಿಸರ್ವೇಷನ್ ಬೇಡ. ಒಬ್ಬ ಷೆಡ್ಯೂಲ್ಡ್ ಕಾಸ್ಟ್‌ನವರು ಮುಖ್ಯಮಂತ್ರಿಯಾಗಬೇಕು, ಒಬ್ಬ ಮೈನಾರಿಟಿಯವನು ಮುಖ್ಯಮಂತ್ರಿಯಾಗಬೇಕು, ಒಬ್ಬ ಹಿಂದುಳಿದ ವರ್ಗದವರನ್ನು ಮಾಡಬೇಕು ಎಂದು ಕಾನ್ಸ್‌ಟಿಟ್ಯೂಷನ್‌ನಲ್ಲಿ ತೆಗೆದುಕೊಂಡು ಬನ್ನಿ. ಮುಖ್ಯಮಂತ್ರಿಗೆ ಮಾತ್ರ ಯಾರು ಬೇಕಾದರೂ ಆಗಬಹುದು. ಇದನ್ನು ಪಂಚಾಯಿತಿಗೆ ಏತಕ್ಕೆ ತರುತ್ತಿದ್ದೀರಿ? ದಯವಿಟ್ಟು ಇದು ಸರಿಯಲ್ಲ. ಇದನ್ನು ವಾಪಸ್ ತೆಗೆದುಕೊಳ್ಳಬೇಕು. ಮಾನ್ಯ ಸದಸ್ಯರುಗಳು ಹೇಳಿದಂತೆ ಒಂದು ಹೌಸ್ ಕಮಿಟಿ ಮಾಡಿ, ಪರಿಶೀಲನೆ ಮಾಡಬೇಕೆಂದು ಹೇಳುತ್ತೇವೆ ಏಕೆಂದರೆ ಗ್ರಾಮಂತರ ಮಟ್ಟದಲ್ಲಿ ಬಹಳ ತೊಂದರೆಯಾಗುತ್ತದೆ, ಶೋಷಣೆಗೆ ಬ್ಯಾಕ್‌ವರ್ಡ್ ಕ್ಲಾಸ್‌ನವರನ್ನು ತಂದು ರಬ್ಬರ್ ಸ್ಟಾಂಪ್ ತರಹ ಕೂರಿಸಿಕೊಂಡು ನಾವು ಕೆಲಸವನ್ನು ಮಾಡುತ್ತೇವೆ. ಆದ್ದರಿಂದ ಎಲ್ಲಾ ಜನರಿಗೆ ಸಿಗಬೇಕು. ಬೇಕಾದರೆ ಎಲ್ಲರಿಗೂ ಎರಡೆರಡು ವರ್ಷ ಒಂದು ಅವಕಾಶವನ್ನು ಮಾಡಿಕೊಡಿ. ಇಲ್ಲದಿದ್ದರೆ ಬರೀ ರಬ್ಬರ್ ಸ್ಟಾಂಪ್ ವಿಚಾರವಾಗುತ್ತದೆ ಈ ರಿಸರ್ವೇಷನ್. ಆದ್ದರಿಂದ ದಯವಿಟ್ಟು ಇದನ್ನು ವಿತ್‌ಡ್ರಾ ಮಾಡಬೇಕು. ನಾನು ಖಂಡಿತಾ ವಿರೋಧ ಮಾಡುತ್ತೇನೆ. ನಾನು ಎಲ್ಲಾ ಸದಸ್ಯರಿಗೂ ಮನವಿ ಮಾಡಿಕೊಳ್ಳುತ್ತೇನೆ. ಇದನ್ನು ವಿರೋಧ ಮಾಡಿ ಅಧ್ಯಕ್ಷ ಸ್ಥಾನ, ಉಪಾಧ್ಯಕ್ಷ ಸ್ಥಾನ ಎಲ್ಲಾ ಜನರಿಗೂ ಸಿಗುವಂಥ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ, ಇದಕ್ಕೆ ನನ್ನ ವಿರೋಧವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಸವರಾಜು (ವೀರಾಜಪೇಟೆ) : ಮಾನ್ಯ ಉಪಾಧ್ಯಕ್ಷರೇ, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯಲ್ಲಿ ರಿಸರ್ವೇಷನನ್ನು ತೆಗೆಕೊಂಡು ಬಂದರು. ಆ ರಿಸರ್ವೇಷನ್‌ಗೆ ಯಾವ ಮಾನದಂಡವನ್ನು ಉಪಯೋಗಿಸಿದರು ಎನ್ನುವುದು ಸರಿಯಾಗಿ ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಕೆಲವಾರು ಜಿಲ್ಲೆಗಳಲ್ಲಿ, ಕೆಲವಾರು ಸ್ಥಳಗಳಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್ ಇಲ್ಲ, ಪರಿಶಿಷ್ಟ ಪಂಗಡದವರೇ ಇಲ್ಲ ಎಂದು ಒಂದು ನಿರ್ಧಾರವನ್ನು ಸರ್ಕಾರದವರು ಕೈಗೊಂಡಿದೆ. ಆ ನಿರ್ಧಾರವನ್ನು ಹೇಗೆ ಕೈಗೊಂಡರು? ಏಕೆಂದರೆ ಬೆಂಗಳೂರು ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯಿತಿಗೆ ಪರಿಶಿಷ್ಟ ಪಂಗಡದಿಂದ ಯಾವುದೇ ವ್ಯಕ್ತಿಗಳು ಆಯ್ಕೆಯಾಗಬಾರದು ಎನ್ನುವ ಒಂದು ಉದ್ದೇಶ ಸರ್ಕಾರಕ್ಕಿತ್ತೇ? ಆ ದೃಷ್ಟಿಯಿಂದ ರಿಸರ್ವೇಷನನ್ನು ಬೆಂಗಳೂರು ಜಿಲ್ಲೆಯಿಂದ ತೆಗೆದುಹಾಕಿದಿರಾ? ಹಾಗೆಯೇ ಮಂಡ್ಯ ಜಿಲ್ಲೆಯಲ್ಲಿ ಮತ್ತೆ ಹಾಸನ ಜಿಲ್ಲೆಯಲ್ಲಿ ಈ ಪರಿಶಿಷ್ಟ ಪಂಗಡದವರಿಗೆ ಏತಕ್ಕೆ ಈ ರೀತಿ ಅನ್ಯಾಯ ಮಾಡಿದರು? ಇದನ್ನು ಕೇಳುವವರು

ಯಾರೂ ಇಲ್ಲವೇ? ಈ 224 ಜನರು ತುಂಬಿರುವ ಈ ಸಭೆಯಲ್ಲಿ ಕೇವಲ ಇಬ್ಬರಿಗೆ ಮಾತ್ರ ಕೊಟ್ಟಿದ್ದಾರೆ. ಯಾವುದು ಎಂದರೆ ಪರಿಶಿಷ್ಟ ಪಂಗಡದ ಮೀಸಲು ಸ್ಥಾನ. ಈ ಜಿಲ್ಲಾ ಪಂಚಾಯಿತಿ ಎಂದರೆ ಮಂಡ್ಯ ಜಿಲ್ಲೆಯಲ್ಲಿ, ಹಾಸನ ಜಿಲ್ಲೆಯಲ್ಲಿ ಮತ್ತೆ ಬೆಂಗಳೂರು ಜಿಲ್ಲೆಯಲ್ಲಿ ಸಂಪೂರ್ಣವಾಗಿ ಕಿತ್ತುಹಾಕಿದ್ದಾರೆ. ಏಕೆ ಈ ಅನ್ಯಾಯ? ನಾನು ಕೇಳುವುದು ಇದಕ್ಕೆ ಒಂದು ಮಾನದಂಡವೇ ಇಲ್ಲವೇ? ಈ ಜನಾಂಗ ಇಲ್ಲಿಲ್ಲ ಎಂದು ಅವರು ನಿರ್ಧಾರ ತೆಗೆದುಕೊಂಡಿದ್ದಾರೇನು? ಅವರನ್ನು ಯಾವ ಆಧಾರದ ಮೇಲೆ ಕಿತ್ತುಹಾಕಿದರು? ಇದನ್ನು ಸರ್ಕಾರದವರು ಹೇಳಬೇಕು. ಹೀಗೇನೂ ಅನ್ಯಾಯ ಮಾಡಿದ್ದಾರೆ. ಈ ಅನ್ಯಾಯವನ್ನು ಯಾರಿಂದಲೂ ಸರಿಪಡಿಸುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಚಾನಾವಣೆ ಮುಗಿದು ಹೋಗಿದೆ. ಆದರೆ ಮುಂದಾದರೂ ಸರ್ಕಾರ ಈ ಪರಿಶಿಷ್ಟ ಪಂಗದವರ ಬಗ್ಗೆ ಯೋಚನೆ ಮಾಡಬೇಕು. ಅವರು ಯೋಚನೆ ಮಾಡಲಿಲ್ಲ ಎಂದರೆ ಸಂಪೂರ್ಣವಾಗಿ ಕರ್ನಾಟಕದಲ್ಲಿ ಪರಿಶಿಷ್ಟ ಪಂಗಡದವರನ್ನು ತುಳಿಯುತ್ತಿದ್ದಾರೆ ಎಂದು ನಾವು ನಿರ್ಧಾರ ಮಾಡಬೇಕಾಗಿದೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳು ಹಿಂದುಳಿದ ವರ್ಗದವರನ್ನು ನಾವು ಮೇಲೆ ಎತ್ತುತ್ತೇವೆ ಎಂದು ಹೇಳಿದರು ಇದೇ ಸ್ವಾಮಿ, ಮೇಲೆ ಎತ್ತುತ್ತಿರುವುದು? ಇದು ಗಂಭೀರ ವಿಷಯವಾಗಿದ್ದರಿಂದ ಮಾನ್ಯ ಮಂತ್ರಿಗಳಿಂದ ಸೂಕ್ತವಾದಂಥ ಉತ್ತರ ನನಗೆ ಬೇಕಾಗಿದೆ. ಏಕೆಂದರೆ ಈ ಸಭೆಯಲ್ಲಿ ಇಬ್ಬರೇ ಇಬ್ಬರು ಮಾತ್ರ ಪರಿಶಿಷ್ಟ ಪಂಗಡದವರನ್ನು ಪ್ರತಿನಿಧಿಸುವ ವ್ಯಕ್ತಿಗಳಾಗತಿದ್ದೇವೆ. ಒಂದು ನಾನು ವಿರಾಜಪೇಟೆ ಕ್ಷೇತ್ರದಿಂದ, ಇನ್ನೊಂದು ಜನಾತದಳದ ಶಾಸಕರಾಗಿದ್ದಾರೆ. ಅವರು ಗೋಕಾಕ್‌ನಿಂದ ಆರಿಸಿಬಂದಿದ್ದಾರೆ. ಇವರಿಬ್ಬರನ್ನು ಬಿಟ್ಟರೆ ಪರಿಶಿಷ್ಟ ಪಂಗಡದವರ ಬಗ್ಗೆ ಮಾತನಾಡುವುದಕ್ಕೆ ಈ ಸದನದಲ್ಲಿ ಯಾರೂ ಮುಂದೆ ಬರುವುದಿಲ್ಲ. ಆದ್ದರಿಂದ ದಯವಿಟ್ಟು ತಾವು ಗಂಭೀರವಾಗಿರುವ ವಿಷಯವನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ನಮಗೆ ಒಂದು ಸೂಕ್ತ ಭರವಸೆಯನ್ನು ಕೊಡಿಸಬೇಕೆಂದು ತಮ್ಮಲ್ಲಿ ನಾನು ಕೇಳಿ ಕೊಳ್ಳುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಉಪಾಧ್ಯಕ್ಷರೇ, 160 ನೇ ಸೆಕ್ಷನ್‌ಗೆ ಇದು ಪ್ರಕರಣದ ಪ್ರತಿಯೋಜನೆ ಎಂದು ಮಾಡಿ ಇದರಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಏನು ಹೇಳಿದ್ದಾರೆಂದರೆ "ಜಿಲ್ಲಾ ಪಂಚಾಯಿತಿ ಚುನಾಯಿತ ಸದಸ್ಯರಲ್ಲ ಜಿಲ್ಲೆಯ ತಾಲ್ಲೂಕುಗಳಿಂದ ಚುನಾಯಿತರಾದದ ವ್ಯಕ್ತಿಗಳಿರತಕ್ಕಂಥದ್ದು. ಪ್ರತಿಯೊಂದು ತಾಲ್ಲೂಕಿನಿಂದ ಚುನಾಯಿತರಾಗಿರುವ ಸದಸ್ಯರ ಸಂಖ್ಯೆಯನ್ನು 40 ಸಾವಿರ ಜನಸಂಖ್ಯೆಗೆ ಅಥವಾ ಅದರ ಭಾಗಶಃ ಸದಸ್ಯರೆಂದು ನಿಗದಿಪಡಿಸಲಾಗಿದೆ". ಅಲ್ಲಿ ಉತ್ತರ ಕನ್ನಡ, ಚಿಕ್ಕಮಗಳೂರು ಜಿಲ್ಲೆಗಳ ಸಂಬಂಧದಲ್ಲಿ ಎಕ್ಸ್‌ಷನ್ ಆಗಿ ಈ ಸಂಖ್ಯೆಗೆ 30 ಸಾವಿರ ಜನಸಂಖ್ಯೆಗೆ ಅಥವಾ ಅದರ ಭಾಗಶಃ ಒಬ್ಬ ಸದಸ್ಯನಂತೆ ಇರತಕ್ಕದ್ದು ಎಂದು ಮಾಡಲಾಗಿದೆ. ಮತ್ತೆ ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಆ ಸಂಖ್ಯೆ 18 ಸಾವಿರ ಜನಸಂಖ್ಯೆಗೆ ಅಥವಾ ಅದರ ಭಾಗಶಃ ಒಬ್ಬ ಸದಸ್ಯ ಇರತಕ್ಕದ್ದು. ಇದಕ್ಕೆ there is no justification ಮೂರು ಜಿಲ್ಲೆಗೆ ಮಾತ್ರ ಎಕ್ಸ್‌ಪ್ಷೆನ್ಸ್ ಕೊಟ್ಟು ಈ ರೀತಿ ಮಾಡುವುದು ರೀಜನಲ್ ಇಂಬ್ಯಾಲೆನ್ಸ್ ಆಗುತ್ತದೆ. ಒಂದು ಜಿಲ್ಲೆಗೆ ಬೇರೆ ರೀತಿ ಮಾನದಂಡ ಮಾಡಿ, ಇನ್ನೊಂದು ಜಿಲ್ಲೆಗೆ ಈ ರೀತಿ ಮಾಡುವುದು ಕಾನೂನಿನಲ್ಲಿ ಇದು ನಿಲ್ಲತಕ್ಕದಲ್ಲ. ಆದುದರಿಂದ ಇದನ್ನು ತಂದಿರುವುದು ನಿಮ್ಮ ಸರಿಯಾದ ತಿದ್ದುಪಡಿಯಾಗಲಾರದು. It will not stand the scrutiny of the Court. ಎನ್ನುವುದು ಒಂದು. ಮತ್ತೊಂದು ಈಗತಾನೆ ಮಾನ್ಯ ಬಸವರಾಜುರವರು ಹೇಳಿದರು. ಎಸ್‌ಟಿ ಗಿರಿಜನರ ಬಗ್ಗೆ ಮಾತನಾಡುವುದಕ್ಕೆ ಯಾರೂ ಇಲ್ಲ ಎಂದು ಗಿರಿಜನರ ಬಗ್ಗೆ ಮಾತನಾಡುವುದಕ್ಕೆ ಈ ಸದಸ್ಯರೆಲ್ಲರೂ ಕೂಡ ಸಿದ್ಧರಾಗಿದ್ದೇವೆ, ಅದರ ಬಗ್ಗೆ

ಅವರು ಯೋಚನೆ ಮಾಡುವುದು ಬೇಡ. ಅವರ ಹಿತವನ್ನು ಕಾಪಾಡುವುದಕ್ಕೋಸ್ಕರ ಈ ಗಿರಿಜನ ಮಹಿಳೆಯರಿಗೆ ಎಷ್ಟು ಅನ್ಯಾಯವಾಗಿದೆ ಮಂಡಲ ಪಂಚಾಯಿತಿ ಎಲೆಕ್ಷನ್ ಬಂದಮೇಲೆ, ಮೂರು ಸಾವಿರಕ್ಕಿಂತ ಹೆಚ್ಚು ಮಹಿಳೆಯರಿಗೆ ರಿಸರ್ವೇಷನನ್ನು ಕೊಟ್ಟರು. ಮಂಡಲ ಪಂಚಾಯಿತಿಯಲ್ಲಿ ಮಹಿಳೆಯರೇ ಇಲ್ಲ ಎಂದು ಚುನಾವಣೆಯಾಗಲಿಲ್ಲ. ಖಾಲಿ ಬಿದ್ದಿದೆ. ಈಗ ಅದನ್ನು ತುಂಬುವುದಕ್ಕೆ ತಾವು ಏನು ಪ್ರಯತ್ನ ಮಾಡಿದಿರಿ? ಒಂದುಕಡೆ ಮಹಿಳೆಯರಿಗೆ 73 ನೇ ಅಮೆಂಡ್‌ಮೆಂಟ್ ಪ್ರಕಾರವಾಗಿ ರಿಸರ್ವೇಷನ್ 30 ಪರ್‌ಸೆಂಟ್ ಎಂದು ಹೇಳುವುದು. ಆ 30 ಪರ್‌ಸೆಂಟನ್ನು ಎಲ್ಲಿ ಕೊಡುವುದು ಎಂದು ಹೇಳಿದರೆ ಎಲ್ಲಿ ಮಹಿಳೆಯರು ಸಿಗುವುದಿಲ್ಲವೋ ಅದನ್ನು ಆರಿಸಿ ಅಲ್ಲಿ ಮಹಿಳೆಯರಿಗೆ ತೋರಿಸುವುದು. ಸ್ಟಾಟಿಸ್ಟಿಕ್ಸ್ ಬಂದಾಗ ಮಹಿಳೆಯರಿಗೆ ರಿಸರ್ವೇಷನ್ ಮಾಡಿದ್ದೇವೆ 30 ಪರ್‌ಸೆಂಟ್ ಎಂದು ಹೇಳುವುದು. ಕಾರ್ಯರೂಪಕ್ಕೆ ಬಂದಾಗ ಮಹಿಳೆಯರೇ ಜಲ್ಲೆಯಲ್ಲಿಲ್ಲದಂಥ ಪರಿಸ್ಥಿತಿ ಒದಗಿ ಬಂದಿರುತ್ತದೆ. ಆದುದರಿಂದ ನೀವು 80 ಪರ್‌ಸೆಂಟ್ ಇಲ್ಲವೇ ಇರುವಾಗ ಬೇರೆಯವರಿಗೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದೀರಿ. ಹರಿಜನ ಮತ್ತು ಗಿರಿಜನ ಮಹಿಳೆಯರು ಇಲ್ಲದೇ ಇರುವ ಸಂದರ್ಭದಲ್ಲಿ ಆ ಕ್ಷೇತ್ರದಲ್ಲಿರುವ ಬೇರೆ ಮಹಿಳೆಯರು ಅಲ್ಲಿಗೆ ಬರುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡುವುದಕ್ಕೆ ಅಮೆಂಡ್‌ಮೆಂಟನ್ನು ತಂದಿಲ್ಲ. 73 ಅಮೆಂಡ್‌ಮೆಂಟ್ ಬಗ್ಗೆ ಏನೂ ಇದರಲ್ಲ ಚಕಾರ ಇಲ್ಲ. ಅದರ ಬಗ್ಗೆ ತಾವು ಯೋಚನೆ ಮಾಡಬೇಕು. ಮತ್ತೊಂದು ಮಂಡಲ್ ಕಮೀಷನ್ ಜಡ್ಜ್‌ಮೆಂಟ್ ಸುಪ್ರೀಂ ಕೋರ್ಟ್‌ನಲ್ಲಿ ತೀರ್ಮಾನವಾಗುವ ಸಂದರ್ಭದಲ್ಲಿ ಒಂದು ಮಾತನ್ನು ಉಲ್ಲೇಖಿಗೊಳಿಸಿದ್ದಾರೆ. ಅವರು ಏನು ಹೇಳಿದ್ದಾರೆಂದರೆ 73 ನೇ ಅಮೆಂಡ್‌ಮಂಟ್ ಪ್ರಕಾರ ರಿಸರ್ವೇಷನ್ ಕಡೆಯಾದರೆ horizontal reservation ಹಾರಿಜಾಂಟಲ್ ರಿಸರ್ವೇಷನ್ ಎಂದಾಗ ನೀವು 80 ಪರ್‌ಸೆಂಟ್ ಮೇಲ್ವರ್ಗದವರಿಗೆ 'ಎ' ವರ್ಗದವರಿಗೆ 80 ಪರ್‌ಸೆಂಟ್, ಬಿ ವರ್ಗದವರಿಗೆ 20 ಪರ್‌ಸೆಂಟ್ ರಿಸರ್ವೇಷನ್ ಮಾಡಿದಾಗ, ಅದರಲ್ಲ ಹಾರಿಜಾಂಟಲ್ ರಿಸರ್ವೇಷನ್ ಮಾಡಿ 40 ಪರ್‌ಸೆಂಟ್ ಮಹಿಳೆಯರಿಗೆ, 20 ಪರ್‌ಸೆಂಟ್‌ನಲ್ಲಿ 10 ಪರ್‌ಸೆಂಟ್ ಮಹಿಳೆಯರಿಗೆ ಮಾಡುವುದಕ್ಕೆ ತಾವೇನಾದರೂ ಇದರಲ್ಲಿ ಅವಕಾಶ ಮಾಡಿ ಕೊಡುತ್ತೀರಾ? ಇದು 73 ನೇ ಅಮೆಂಡ್‌ರಮೆಂಟ್, ಇದು ಕಾನೂನು, ಇದು ಸುಪ್ರೀಂ ಕೋರ್ಟಿನಲ್ಲಿ ಬಂದಿರುವ ತೀರ್ಪು. ಅದರ ಬಗ್ಗೆ ಇದರಲ್ಲಿ ಏನೂ ಕೂಡ ಇಲ್ಲ. ಆದುದರಿಂದ ಇದರಲ್ಲಿ ಎಲ್ಲಾ ವಿಷಯದಲ್ಲಿ ಮಹಿಳೆಯರನ್ನು ಹೊರಗೆಹಾಕಿ ಅವರು ಬರದೇ ಇರುವ ಹಾಗೆ ಮಾಡಿ ಬೇರೆಯುವರಿಗೆ ಅವಕಾಶ ಮಾಡಿಕೊಡುವುದಕ್ಕೆ ಮೇಲೆ ಡಾಮಿನೇಟೆಡ್ ಸೊಸೈಟಿಯಲ್ಲಿ ಅವರನ್ನು ಮೇಲ್ವರ್ಗಕ್ಕೆ ತರುವುದಕ್ಕೋಸ್ಕರ ತಂದಿರುವ ಕಾನೂನು. ಇದು ನಿಜವಾಗಿಯೂ ಕೂಡ ಒಳ್ಳೆಯ ಉದ್ದೇಶದಿಂದ ತಂದಿರುವಂಥದ್ದಲ್ಲ. ಇದರಲ್ಲಿ ಅನ್ಯಾಯವಾಗಿದೆ. ಇದನ್ನು ತಕ್ಷಣ ಸರಿಪಡಿಸಿ, ಕಮಿಕಟಿಗೆ ರೆಫರ್ ಮಾಡಿ ಅದನ್ನು ಯಾವ ರೀತಿ ತರಬೇಕೋ ಅದನ್ನು ಮಾಡಿ. ಹೀಗೆ ಈ ರೀತಿ ಅಮೆಂಡ್‌ಮೆಂಟ್‌ನ್ನು ತರಾತುರಿಯಲ್ಲಿ ತೆಗೆದುಕೊಂಡು ಬಂದು ಅಮೆಂಡ್‌ಮೆಂಟ್ ಮಾಡುವುದರಿಂದ ಇದರಲ್ಲಿ ಅನಾಹುತ ಜಾಸ್ತಿಯಾಗುತ್ತದೆ. ಅನುಕೂಲ ಜಾಸ್ತಿಯಾಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮಗೆ ತಿಳಿಸಿ ನನ್ನ ವಂದನೆಗಳನ್ನು ತಮಗೆ ಸಲ್ಲಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೇ,ಸನ್ಮಾನ್ಯ ಉಪಾಧ್ಯಕ್ಷರೇ, ಈ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಮೀಸಲಾತಿಯನ್ನು ತರುವಂಥದ್ದು ಸರಿಯಲ್ಲ ಎನ್ನುವುದು ನನ್ನ ಸ್ವಚ್ಛವಾದಂಥ ಅಭಿಪ್ರಾಯ. ಅದಕ್ಕೆ ಎರಡು ಮುಖ್ಯವಾದಂಥ ಕಾರಣಗಳಿವೆ. ಒಂದು, ತಾಲ್ಲೂಕು ಪಂಚಾಯಿತಿ ಮತ್ತು

ಜಿಲ್ಲಾಪಂಚಾಯಿತಿಗಳ ಸದಸ್ಯರಾಗಿ ಆಯ್ಕೆಯಾದಂಥ ಸದಸ್ಯರ ಪ್ರಜಾಪ್ರಭುತ್ವ ಹಕ್ಕಿನ ಪ್ರಶ್ನೆ ಇದರಲ್ಲಿ ಮುಖ್ಯವಾಗಿ ಇದೆ ಏಕೆಂದರೆ, ಯಾವುದೋ ಒಂದು ತಾಲ್ಲೂಕು ಪಂಚಾಯಿತಿಗೆ, ಯಾವುದೋ ಒಂದು ವರ್ಗಕ್ಕೆ ಮೀಸಲಾತಿಯನ್ನು ನೀವು ಇಟ್ಟಿರುತ್ತೀರಿ.

ಆ ತಾಲ್ಲೂಕು ಪಂಚಾಯಿತಿ ಸದಸ್ಯರ ಪೈಕಿ ಒಬ್ಬರೇ ಒಬ್ಬರು ಯಾರಾದರೂ ಆಯ್ಕೆ ಆಗಿದ್ದರೆ, ಆಯ್ಕೆ ಆಗದಿದ್ದರೂ ಕೂಡ ಅಂತಹ ಒಂದು ಸಂದರ್ಭದಲ್ಲಿ ಆಯ್ಕೆಯಾದ ಸದಸ್ಯರುಗಳಿಗೆ ಪ್ರಾಜಾಪ್ರಭುತ್ವದ ಮೂಲ ಭೂತ ನಿಯಮದ ಪ್ರಕಾರ ತಮಗೆ ಇಷ್ಟ ಬಂದಂತಹ ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಳ್ಳತಕ್ಕ ಅವಕಾಶ ಇರುವುದಿಲ್ಲ. ಈ ಕಾನೂನಿಂದ ಆಯ್ಕೆ ಆದಂತಹ ಸದಸ್ಯರು ತಮ್ಮ ಹಕ್ಕಿನಿಂದ ವಂಚಿತರಾಗುತ್ತಾರೆ. ಮೂಲಭೂತವಾಗಿ ಇರತಕ್ಕ ಪ್ರಶ್ನೆ ಇದು. ಉದಾಹರಣೆಗೆ ಯಾವುದೋ ಒಂದು ತಾಲ್ಲೂಕು ಪಂಚಾಯತಿ ಅಧ್ಯಕ್ಷ ಸ್ಥಾನವನ್ನು ಬಿಸಿಎಂ (ಎ) ಗುಂಪಿಗೆ ನೀವು ಮೀಸಲಾತಿ ಇಟ್ಟಿರುತ್ತೀರಿ. ಆ ಗುಂಪಿಗೆ ಎಲ್ಲಾ ಪಕ್ಷದ ಸದಸ್ಯರೂ ಸೇರಿ ಒಬ್ಬರು ಆಯ್ಕೆ ಆಗಿದ್ದಾರೆ ಅವರೆಲ್ಲಾ ಸೇರಿ ಓಟು ಹಾಕತಕ್ಕಪರಿಸ್ಥತಿ ಬರುತ್ತದೆ. ಅದು ಪ್ರಜಾಪ್ರಭುತ್ವದ ಮೂಲಭೂತ ನಿಯಮ ಆಗಿರತಕ್ಕ ಸದಸ್ಯರ ಆಯ್ಕೆ ಹಕ್ಕನ್ನು ಕಿತ್ತುಕೊಳ್ಳತಕ್ಕಂಥಹದ್ದು ಒಂದು ಆದರೆ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯ ಚುನಾವಣೆಗಳನ್ನು ಪಕ್ಷದ ಆಧಾರದ ಮೇಲೆ, ಪಕ್ಷದ ಚಿಹ್ನೆಗಳ ಮೇಲೆ ನಡೆಸಿದ್ದೀರಿ. ಅದಕ್ಕೆ ನಿಮ್ಮ ಕಾಯಿದೆಯಲ್ಲಿ ಅವಕಾಶ ಇದೆ. ಪಕ್ಷದ ಚಿಹ್ನೆಯನ್ನು ಹಾಕಿ ಚುನಾವಣೆ ನಡೆಸತಕ್ಕದ್ದರ ಅರ್ಥ ಆಯಾಯ ಪಕ್ಷದ ರಾಜಕೀಯ ಧೋರಣೆಗೆ ಅನುಗುಣವಾಗಿ ಜನರು ಮತ ಕೊಡಬೇಕು. ಆ ಪಕ್ಷಕ್ಕೆ ಮತ ಆಗುತ್ತದೆ. ಆ ದೃಷ್ಟಿಯಲ್ಲಿ ರಾಜಕೀಯ ಪ್ರಜ್ಞೆಯನ್ನು ಸಾಮಾನ್ಯ ಜನರಲ್ಲಿ ಹೆಚ್ಚಿಸತಕ್ಕ ಉದ್ದೇಶದಿಂದಾಗಿ ಪಕ್ಷದ ಚುನಾವಣೆಯಲ್ಲಿ ಪಕ್ಷದ ಚಿಹ್ನೆಗಳನ್ನು ಕೊಟ್ಟಿರತಕ್ಕದ್ದು. ಆ ಪಕ್ಷದ ಚಿಹ್ನೆಯ ಮೇಲೆ ಆಯ್ಕೆಯಾದಂತಹ ಸದಸ್ಯರುಗಳು, ಇನ್ನೊಂದು ಪಕ್ಷದ ಚಿಹ್ನೆಯ ಮೇಲೆ ಆಯ್ಕೆಯಾದಂತಹ ಸದಸ್ಯರನ್ನು ಅಧ್ಯಕ್ಷ ಸ್ಥಾನಕ್ಕೆ ಆರಿಸಬೇಕಾದಂತಹ ಪರಿಸ್ಥಿತಿ ಬಂದಾಗ, ಒಂದು ರಾಜಕೀಯ ಧೋರಣೆಗಳ, ಭಿನ್ನ ಮತ್ತು ವಿಪರ್ಯಾಸ ಒಂದು ಕಡೆ ಬರುತ್ತದೆ. ಇನ್ನೊಂದು ಕಡೆ ಅವರ ಪ್ರಜಾಪ್ರಭುತ್ವದ ಹಕ್ಕಿನ ಪ್ರಶ್ನೆ ಬರುತ್ತದೆ. ಮೂರನೆಯದು ಮುಖ್ಯವಾದುಂತಹ ಅಂಶ, ವರ್ಷಕ್ಕೆ ಒಬ್ಬರಿಗೆ ಎಂದು ಹೇಳತಕ್ಕಂಥ ರೊಟೇಷನ್ ಪದ್ಧತಿಯನ್ನು ತರುತ್ತಾರೆಂದು ಎಂದು ಕೇಳಿದ್ದೇನೆ. ನೀವು ಬೇರೆ ಬಿಲ್ ಕೊಡಬೇಕು. ನೀವು ಯಾವುದೋ ಒಂದನ್ನು ಹಿಡಿದುಕೊಂಡು ಬಿಲ್ ಇಲ್ಲ ಎಂದು ಮಾನ್ಯ ನಾಗೇಗೌಡರೇ ಹೇಳಬೇಡಿ. ನೀವು ಹಿರಿಯ ಸದಸ್ಯರು. ಆದ್ದರಿಂದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನದ ಮೀಸಲಾತಿ ಪ್ರಶ್ನೆ ಈ ರೀತಿಯಾಗಿ ಬಂದು ಪ್ರಜಾಪ್ರಭುತ್ವ ಧೋರಣೆ, ಮೂಲ ತತ್ವಕ್ಕೆ ವಿರೋಧ ಆಗತಕ್ಕದ್ದು ಒಂದು. ಪಕ್ಷ ರಾಜಕೀಯಕ್ಕೆ ವಿರೋಧ ಆಗತಕ್ಕದ್ದು ಒಂದು. ಆದ್ದರಿಂದ ಇದು ಸರಿಯಲ್ಲಿ ಎಂದು ಹೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ :' ಈಗಾಗಲೇ ಎಲ್ಲಾ ಮಾನ್ಯ ಸದಸ್ಯರುಗಳು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಡಿ.ಕೆ. ಶಿವಕುಮರ್ : ಮಾನ್ಯ ಅಧ್ಯಕ್ಷರೆ, ರೂಲಿಂಗ್ ಪಾರ್ಟಿಯ ಸದಸ್ಯರಿಗೆ ಮಾತನಾಡಲು ಅವಕಾಶ ಮಾಡಿಕೊಡಿ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸದನದ ಗೌರವಾನ್ವಿತ ಸದಸ್ಯರುಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಮೂಲಭೂತವಾಗಿ ಕಾಗೋಡು ತಿಮ್ಮಪ್ಪ ನವರು ಇಲ್ಲದ ಪ್ರಯತ್ನ ಮಾಡಿ, ನಿಮಗೆ ಸಾಮಾಜಿಕ ನ್ಯಾಯದ ಬಗ್ಗೆ ಕಳವಳಿಯಿಲ್ಲ ಎನ್ನುವಂತಹ ಮಾತನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ನಾನು ನಂಬಿದ್ದೆ, ಇಂತಹ

ಒಂದು ನಂಬಿಕೆಗಳಿಗೆ ಬದ್ಧರಾದಂತಹ ಮಾನ್ಯ ಕಾಗೋಡು ತಿಮ್ಮಪ್ಪನವರು ಅವರು ತಾವು ತೋರಿಸಲಾರದಂತಹ, ಕ್ರಾಂಗ್ರೆಸ್ ಪಕ್ಷದವರು ತೋರಿಸಿಲಾರದಂತಹ ರಾಜಕೀಯ ಸಂಕಲ್ಪದ ಅಭಾವವನ್ನು ಜನತಾ ದಳದ ಈ ಸರ್ಕಾರ ತೋರಿಸಿದೆ ಎನ್ನುವುದರ ಬಗ್ಗೆ ಮೆಚ್ಚಿಗೆಯನ್ನು ಸೂಚಿಸುತ್ತಾರೆಂದು ನಾನು ಭಾವಿಸಿದ್ದೆ. ಮಾನ್ಯ ಉಪಾಧ್ಯಕ್ಷರೆ, ಪ್ರಾರಂಭದ ಹಂತದಲ್ಲಿ ಅವರ ಕಾಲದಲ್ಲಿ ಗ್ರಾಮ ಪಂಚಾಯತಿಯ ಚುನಾವಣೆಗಳು ನಡೆದಂತಹ ಸಂದರ್ಭದಲ್ಲಿ, 1986ನೇ ಇಸವಿಯಲ್ಲಿ ಅಂದು ಇದ್ದಂತಹ ಸರ್ಕಾರ ಪ್ರರಟಣೆ ಮಾಡಿರತಕ್ಕಂಥ ಜಾತಿಯ ಆಧಾರದ ಮೇಲೆ, ಒಂದು ಚುನಾವಣೆಯ ಪ್ರಕ್ರಿಯೆಗಳನ್ನು ನಡೆಸಿದರು. ಅದರಲ್ಲಿ 10 ಸಾವಿರ ರೂಪಾಯಿಗಳಿಗಿಂತ ಹೆಚ್ಚು ವರಮಾನ ಇರತಕ್ಕಂಥವರು (ಡಿ) ವರ್ಗದಲ್ಲಿ ಕೂಡ ಸೇರತಕ್ಕ ಸಂಭವ ಇದ್ದುದರಿಂದ ಅನೇಕ ಹಿರಿಯ ರಾಜಕೀಯ ಮುಖಂಡರುಗಳ ಮಕ್ಕಳು ಕೂಡ, ಇದು ತಮಗೆಲ್ಲಾ ವೇದ್ಯವಾಗಿರತಕ್ಕಂಥ ವಿಷಯ. ಅವರು ಹಿಂದುಳಿದ ಜನಾಂಗಕ್ಕಾಗಿ ಮೀಸಲಾಗಿರತಕ್ಕ ಸ್ಥಾನವನ್ನು ಕಸಿದುಕೊಂಡತಕ್ಕಂಥ ಪ್ರಯತ್ನ ಆಗಿತ್ತು. ಅದಕ್ಕೆ ಅವರು ಬಾಧ್ಯರು ಕೂಡ ಆಗಿದ್ದರು. ಆ ರೀತಿಯಾಗಿ ಗ್ರಾಮ ಪಂಚಾಯತಿ ಚುನಾವಣೆಗಳು ಆದವು. ನಾವು 'ಅ' ಮತ್ತು 'ಬಿ' ವರ್ಗದ ಪ್ರಕ್ರಿಯೆಗಳಲ್ಲಿ ಎರಡು ವಿಭಾಗ ಮಾಡಲಿಕ್ಕೆ ಮೂಲಭೂತವಾದ ಕಾರಣ ಅಂತಹ ಹಿನ್ನೆಲೆಯಲ್ಲಿ ಕಂಡು ಕೊಂಡಾಗ, ಯಾರಿಗಾಗಿ ಸಾಮಾಜಿಕ ನ್ಯಾಯಕ್ಕಾಗಿ ಮೀಸಲಾತಿಯನ್ನು ಮಾಡಿರುತ್ತೇವೆ, ಅದನ್ನು ಇನ್ನೊಂದು ಮಾರ್ಗದ ಮೂಲಕವಾಗಿ ಅಥವಾ ಇನ್ನೊಂದು ದಾರಿಯ ಮೂಲಕ ಪಡೆಯಬಾರದು ಎನ್ನುವ ಕಾರಣಕ್ಕಾಗಿ ನಾವು (ಎ) ವರ್ಗ ಮತ್ತು (ಬಿ) ವರ್ಗ ಎಂಬ ಪ್ರಭೇದಗಳನ್ನು ಮಾಡಿದ್ದೇವೆ. ತಮಗೆಲ್ಲಾ ಗೊತ್ತಿರುವಂತೆ ಅವರು ಮಂಡಲದ ಆಯೋಗದಲ್ಲಿ ಆಗಲೀ ಅಥವಾ ಇನ್ನೊಂದರಲ್ಲಿ ಆಗಲೀ ಶೇಕಡಾ 27ರಷ್ಟು ಮೀಸಲಾತಿಯನ್ನು ಹಿಂದುಳಿದ ಜನಾಂಗಕ್ಕೆ ಕೊಡಬೇಕು, 15(4) ಮತ್ತು 16(4) ಸಂವಿಧಾನದಲ್ಲಿ ಅದು ಶೈಕ್ಷಣಿಕ ಹಾಗೂ ಸಾಮಾಜಿಕ ಹಿಂದುಳಿದಿರುವಿಕೆಯನ್ನು ಗುರುತಿಸಿ ಅವರಿಗಾಗಿ ಮೀಸಲಾತಿಯನ್ನು ಕೊಡಬೇಕು ಎಂಬ ವಾದ ಇದೆ. ಆದರೆ ರಾಜಕೀಯ ಸ್ಥಾನ ಮಾನಗಳಲ್ಲಿ ರಾಜಕೀಯ ಮೀಸಲಾತಿ ಎಷ್ಟು ಇರಬೇಕು ಎನ್ನುವಂತಹ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನವರು ಇಲ್ಲಿಯವರೆಗೆ ಕೂಡ ಯಾವುದೇ ಅಭಿಪ್ರಾಯವನ್ನು ಅಥವಾ ತೀರ್ಮಾನವನ್ನು ವ್ಯಕ್ತಪಡಿಸಿಲ್ಲ. ಈ ಹಿನ್ನಲೆಯಲ್ಲಿ ಒಂದು ವಾದ ಕೂಡ ಇತ್ತು. ಶೇಕಡ 50ಕ್ಕಿಂತಲೂ ಯಾವುದೇ ಸಂದರ್ಭದಲ್ಲಿ ಕೂಡ ಮೀಸಲಾತಿ ಹೆಚ್ಚು ಇಡಬಾರದು ಎನ್ನುವ ವಾದದ ಹಿನ್ನಲೆಯಲ್ಲಿ 33ಕ್ಕಿಂತ ಅಂದರೆ ಶೇಕಡ 56ಕ್ಕಿಂತ ಹೆಚ್ಚು ನಾವೇನಾದರೂ ಮೀಸಲಾತಿಯನ್ನು ಮಾಡಿದರೆ, ಅದು ಸಿಂಧು ಆಗಬಹುದು, ಯಾರಾದರೂ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸಬಹುದು ಎನ್ನುವ ವಾದ ಕೂಡ ಇತ್ತು; ಆ ವಾದ ಇದ್ದಾಗಲೂ ಕೂಡ ಆ ವಾದವನ್ನು ನಾವು ಸಮರ್ಥಿಸಿ ಕೊಳ್ಳತಕ್ಕಂಥ ರೀತಿಯ ತರ್ಕ ನಮ್ಮಲ್ಲಿದೆ ಎನ್ನುವಂತಹ ಭಾವನೆಗಾಗಿ, ಶೇಕಡ 33ರಷ್ಟು ಮೀಸಲಾತಿಯನ್ನು ಹಿಂದುಳಿದ ವರ್ಗಕ್ಕೆ ನಾವು ಪ್ರಥಮ ಬಾರಿಗೆ ಕೊಟ್ಟಿದ್ದೇವೆ. ಜಾತೀಯ ಆಧಾರದ ಮೇಲೆ ನಾವು ಕಳೆದ ಮೂರು ವರ್ಷಗಳಲ್ಲಿ ಅವರು ಯಾವ್ಯಾವುದೋ ಕಾರಣಗಳ ಮೂಲಕವಾಗಿ ಯಾರು ಹಿಂದುಳಿದ ಜನಾಂಗ ಎನ್ನುವ ಮಾನದಂಡವನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯ ಆಗಲಿಲ್ಲ. ಈ ವಿಚಾರದಲ್ಲಿ ಎಷ್ಟೋ ಅಸ್ಪಷ್ಟವಾಗಿರತಕ್ಕ ಗೊಂದಲಗಳು ಇವೆ. ಒಂದಲ್ಲ, ಎರಡಲ್ಲ ಮೂರು ಬಾರಿ, ಹಿಂದುಳಿದ ಜನಾಂಗಕ್ಕಾಗಿ ಪ್ರಕಟಿಸಲ್ಪಟ್ಟಿರತಕ್ಕ ಆಜ್ಞೆಗಳನ್ನು ಹಿಂದೆ ತೆಗೆದು ಕೊಂಡಂತಹ ಉದಾಹರಣೆ ಮಾನ್ಯ ತಿಮ್ಮಪ್ಪನವರು ಇದ್ದಂತಹ ಸರ್ಕಾರದಲ್ಲಿ ಅವರೇ ಫೆಬ್ರವರಿ ತಿಂಗಳಲ್ಲಿ ಪ್ರಕಟಪಡಿಸಿರತಕ್ಕಂಥ ಏಪ್ರಿಲ್ 94ನೇ ಸಾಲಿನಲ್ಲಿ ಪ್ರಕಟಪಡಿಸರತಕ್ಕಂಥ ಅವರ ಆಜ್ಞೆಯ ಪ್ರಕಾರ ಅತ್ಯಂತ ಹಿಂದುಳಿದವರು, ಅತೀ ಹಿಂದುಳಿದವರು, ಮತ್ತು ಗ್ರಾಮಂತರ ಪ್ರದೇಶದಲ್ಲಿನ ಹಿಂದುಳಿದವರು ಮತ್ತು ಉದ್ಯೋಗದ ಮೂಲಕ

ಹಿಂದುಳಿದಿರತಕ್ಕಂತಹ ಅಕ್ಯುಪೇಷನಲ್ ಗ್ರೂಪ್ ಎನ್ನುವಂತಹ ರೀತಿಯಲ್ಲಿ ನಾಲ್ಕು ವಿಭಾಗಗಳನ್ನು ಮಾಡಿದ್ದರು. ಅದರಲ್ಲಿ ಅತ್ಯಂತ ಹಿಂದುಳಿದವರು ಮತ್ತು ಅತಿ ಹಿಂದುಳಿದವರಲ್ಲಿ 192 ಜಾತಿಗಳನ್ನು ಯಾರು ಪ್ರಕಟಿಸಿದ್ದರು, ಅವರನ್ನೇ ನಾವು ಈಗ 192 ಜಾತಿಗಳು ಎಂದು ಪರಿಗಣಿಸಿ, ಅವರನ್ನು ಅ ವರ್ಗದಲ್ಲಿ ಸೇರಿಸಿದ್ದೇವೆ. ಅದಕ್ಕಿಂತಲೂ ಹೆಚ್ಚು ಕ್ರಾಂತಿಕಾರವಾಗಿ ಮುಸ್ಲಿಂ ಜನಾಂಗವನ್ನು ಈ 192 ಜಾತಿಯಗಳಲ್ಲಿ ಸೇರಿಸಿಕೊಳ್ಳುವುದರ ಮೂಲಕವಾಗಿ ಹಿಂದುಳಿದ ಜನಾಂಗದ ಪಟ್ಟಿಯಲ್ಲಿ ಸೇರಿಸಿರತಕ್ಕಂಥ ಪ್ರಥಮ ಆದ್ಯತೆ ಮತ್ತು ಅದರ ಅಭಿಮಾನ ನಮಗೆ ಇದೆ. ಈ ಸರ್ಕಾರಕ್ಕೆ ಸಲ್ಲಬೇಕಾಗಿರತಕ್ಕ ಗೌರವ ಇದು ತಪ್ಪಾಗಲಾರದು. ಭಾರತ ದೇಶದ ಯಾವುದೇ ಸರ್ಕಾರದ ಆಜ್ಞೆಗಳಲ್ಲಿಯೂ ಕೂಡ ಇಡೀ ಮುಸ್ಲಿಂ ಜನಾಂಗವನ್ನು ಹಿಂದುಳಿದಂತಹ ಪಟ್ಟಿಯಲ್ಲಿ ಸೇರಿಸಿಲ್ಲ. ನಾವು ಯಾವುದೇ ಹೊಸ ಜಾತಿಯನ್ನು ಹುಡುಕಿಸುವಂತಹ ಪ್ರಯತ್ನವನ್ನು ಮಾಡಿಲ್ಲ. ಅತ್ಯಂತ ಹಿಂದುಳಿದವರು ಮತ್ತು ಹಿಂದುಳಿದವರು ಎಂದು ಹೇಳಿ, ಹಿಂದಿನ ಸರ್ಕಾರದವರು ಯಾವ ಆಜ್ಞೆಯನ್ನು ಹೊರಡಿಸಿದ್ದರೋ ಆ ಆಜ್ಞೆಯನ್ನು ಅನಾಮತ್ತಾಗಿ, ಅದಕ್ಕೆ ಕೇವಲ ಮುಸ್ಲಿಂ ಜನಾಂಗವನ್ನು ಮಾತ್ರ ಸೇರಿಸುವುದರ ಮೂಲಕವಾಗಿ ಅವರನ್ನು 'ಅ' ವರ್ಗದವರು ಎಂದು ಗುರುತಿಸಲ್ಪಟ್ಟಿದ್ದೇವೆ. ಅವರು ಮೂರನೇ ವರ್ಗದಲ್ಲಿ ಮಾಡಿರತಕ್ಕಂಥ ಗ್ರಾಮೀಣ ಪ್ರದೇಶದ ಒಕ್ಕಲಿಗರು,

ಶ್ರೀ ಕೆ. ಶಿವಕುಮಾರ್ : ಇದರಿಂದ ಸಾಮಾಜಿಕ ನ್ಯಾಯ ದೊರಕಿದೆ ಎಂದಲ್ಲ, ರಾಜಕಾರಣದಲ್ಲಿ ಮುಸ್ಲಿಂ ಬಾಂಧವರು ತಮ್ಮ ಪಕ್ಷಕ್ಕೆ ಮತವನ್ನು ಕೊಟ್ಟಿದ್ದಾರೆ. ಅವರ ಋಣವನ್ನು ತೀರಿಸಬೇಕೆಂಬ ಒಂದೇ ಒಂದು ಕಾರಣಕ್ಕೆ ಮಾಡಿದ್ದೀರೆಯೇ ಹೊರತು ಬೇರೆ ಕಾರಣದಿಂದಲ್ಲ. ಈ ಜನಾಂಗದಿಂದ ನಿಮಗೆ ಅನುಕೂಲ ಆಗಿದೆ, ಸೇರಿಸಿಕೊಂಡಿದ್ದೀರಿ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ ಇದರಲ್ಲಿ ರಾಜಕೀಯ ಲಾಭ ಇದೆ ಎನ್ನುವಂತಹ ಪ್ರಶ್ನೆ ಅಲ್ಲ. ಇದರಲ್ಲಿ ಸಾಮಾಜಿಕ ನ್ಯಾಯವನ್ನು ಕೊಟ್ಟಿರತಕ್ಕ ಪ್ರಶ್ನೆ ಇದೆ. ಅದರಲ್ಲಿ ರಾಜಕೀಯ ಲಾಭವನ್ನು ಕಂಡು ಹಿಡಿಯುತ್ತೇನೆ ಎನ್ನುವುದಾದರೆ ಅದು ಅವರ ಇನ್‌ಫೆರೆನ್ಸ್‌ಗೆ ಬಿಟ್ಟಿರತಕ್ಕಂಥದ್ದು. ಅದು ಫಾಲ್ಸೌಟ್ ಎಂದು ನಾವು ಕರೆಯುತ್ತೇವೆ. ಯಾವುದಾದರೂ ಒಂದು ಒಳ್ಳೆಯ ನಿರ್ದಾರವನ್ನು ತೆಗೆದುಕೊಂಡಾಗ, ಅದರ ಮೂಲಕ ಬರತಕ್ಕಂಥ ಪ್ರಕ್ರಿಯೆಗಳ ಲಾಭವನ್ನು ನಾವು ಪಡೆದಿದ್ದೇವೆ ಎಂದರೆ ನಾವು ನಿಸ್ಸಂದೇಹವಾಗಿ ಅದನ್ನು ಪಡೆದಿದ್ದೇವೆ. ಅದರ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

ಅದರೆ ಅವರು ಹೇಳಿದಂತೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಒಕ್ಕಲಿಗರನ್ನು, ವೀರಶೈವರನ್ನು ಕ್ರಿಶ್ಚಿಯನ್ನರನ್ನು ಮತ್ತು ಬಲಿಜರನ್ನು ಕಮ್ಮಗಳನ್ನು ಈ ರೀತಿಯಾದಂತಹ ಒಂದು ವರ್ಗೀಕರಣ ಮಾಡಿದಂತಹ ಆಜ್ಞೆಯಲ್ಲಿ ಅವರುಗಳನ್ನು ಸೇರಿಸಿಕೊಳ್ಳುವಾಗ ಕೆನೆ ಮೊಸರಿನ ಪದರು ಎನ್ನುವ ರೀತಿ 'ಕ್ರೀಮ್ ಲೇಯರ್' ಎನ್ನುವಂತಹ ಹೊಸ ಪರಿಭಾಷೆಯನ್ನು ಸುಪ್ರೀಂ ಕೋರ್ಟಿನವರು ಬಳಸುತ್ತಿದ್ದಾರೆ. ಅದೂ ಕೂಡಒಂದು ರಾಷ್ಟ್ರೀಯವಾಗಿರತಕ್ಕ ಚರ್ಚೆ ಆಗಲೇಬೇಕಾದದ್ದು ಇದೆ. ಇಷ್ಟು ವರ್ಷಗಳ ಕಾಲ ಈ ಮೀಸಲಾತಿಯ ಸಂಪೂರ್ಣ ಲಾಭವನ್ನು ಆ ತಲೆಮಾರಿನ ವಂಶಸ್ಥರಾಗಿರುವವರೇ ಪಡೆಯಬೇಕು. ಅದು ಬೇರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ, ಎಲ್ಲ ಸೌಲಭ್ಯಗಳಿಂದ ವಂಚಿತರಾಗಿದ್ದವರು ಕೂಡ ಪಡೆಯಬೇಕು ಎನ್ನುವ ಮಾತು ಇರುವುದರಿಂದ ಈ ಒಂದು ಪ್ರಸ್ತಾಪದ ಹಿನ್ನೆಲೆಯಲ್ಲಿ ಬಡ ವರ್ಗದವರಾಗಿರತಕ್ಕ ಈ ಜನಗಳು ಯಾರ್ಯಾರು ಇದ್ದಾರೆ, ಅವರನ್ನು ನಾವು ಗುರುತಿಸಿ ಶೇಕಡ 20ರಷ್ಟು ಮೀಸಲಾತಿ ಕೊಟ್ಟಿದ್ದೆವು. ಮಾನ್ಯ ತಿಮ್ಮಪ್ಪನವರು ಹೇಳಿದರು. ಶೇಕಡ 27ರಷ್ಟು ಮೀಸಲಾತಿಯನ್ನು ಕೊಟ್ಟಂತಹ ಸಂದರ್ಭದಲ್ಲಿ ಆಗಿರತಕ್ಕ ದೊಡ್ಡ ಚರ್ಚೆಯಲ್ಲಿ ಸನ್ಮಾನ್ಯ ಮಧು

ದಂಡವತೆಯವರು ಮಂಡಲ್ ಆಯೋಗದ ಚರ್ಚೆಯ ಕಾಲದಲ್ಲಿ ಹೇಳಿದರು. "It is all an agitation for 27% of the 1%"

ಎನ್ನತಕ್ಕ ಮಾತನ್ನು ಹೇಳಿದರು. ಕೇಂದ್ರದಲ್ಲಿ ಉದ್ಯೋಗದ ಅವಕಾಶ, ಲಭ್ಯತೆ ಕೇವಲ ಶೇ. ಒಂದು ಇರುವಾಗ, ಆ ಒಂದರಲ್ಲಿ ಶೇಕಡ 52ರಷ್ಟು ಜನಸಂಖ್ಯೆ ಇರತಕ್ಕ ಹಿಂದುಳಿದವರಿಗೆ ಶೇಕಡಾ 27ರಷ್ಟು ಮೀಸಲಾತಿ ಕೊಡತಕ್ಕದ್ದಕ್ಕೆ ಇಷ್ಟು ಉಲ್ಬಣಗೊಳ್ಳುವಂತಹ ಪರಿಸ್ಥಿತಿ ನಿರ್ಮಾಣ ಆಗಬಾರದು ಎನ್ನತಕ್ಕಂಥ ಮಾತನ್ನು ಆ ಸಂದರ್ಭದಲ್ಲಿ ಹೇಳಿದರು,

12.50 ಪಿ.ಎಂ.

ಸನ್ಮಾನ್ಯ ಉಪಾಧ್ಯಕ್ಷರೆ, ಆ ಕಾರಣಕ್ಕಾಗಿ ಇಲ್ಲಿ ಶೇಕಡ 27ರಷ್ಟು ಮೀಸಲಾತಿ ಎಂದರೆ ನೂರಕ್ಕೆ ಶೇಕಡ 33ರಷ್ಟು ಮೀಸಲ್ತಿ ಇಟ್ಟು, ಆ ಶೇಕಡ 33ರಲ್ಲಿ ಶೇಕಡ 80 ಎಂದಾಗ ಶೇಕಡ 26.4ರಷ್ಟು ಹಿಂದುಳಿದ ಜನಾಂಗಕ್ಕೆ ಜಾತಿಯ ಆಧಾರದ ಮೇಲೆ ಕೊಡಲ್ಪಟ್ಟಿದೆ. ಇನ್ನು ಉಳಿದ ಶೇಕಡ 20ರಷ್ಟು ಎನ್ನುವಂಥಾದ್ದು 6.6ರಷ್ಟಾಗುತ್ತದೆ. ಅಂದರೆ, ಸಾಮಾನ್ಯವಾಗಿ ಶೇಕಡ 27ರಷ್ಟು ಇರತಕ್ಕಂಥಾದ್ದು ಜಾತಿಯ ಆಧಾರದ ಮೇಲೆ ಪ್ರಪ್ರಥಮ ಬಾರಿಗೆ ಇರತಕ್ಕಂಥ ಮೀಸಲಾತಿಯಾಗಿದ್ದು, ಉಳಿದಿರುವ ಶೇಕಡ 6.4ರಷ್ಟು 'ಬ' ವರ್ಗದಲ್ಲಿ ಸೇರಿರತಕ್ಕ ಜನರಿಗೆ. ಅದರಲ್ಲೂ ಕೂಡ ಕೆನೆ ಮೊಸರಿನ (ಕ್ರೀಮೀತೇಯರ್) ಆಧಾರದ ಮೇಲಿರುವ, ಈಗಾಗಲೇ ದಡ ಸೇರಿರುವ ವರ್ಗಕ್ಕಿಂತ ಕೆಳಗಿರತಕ್ಕ ವರ್ಗದವರನ್ನು ನಾವು ಗುರುತಿಸಿ ಅವರಿಗೆ ಪ್ರಥಮ ಬಾರಿಗೆ ಮೀಸಲಾತಿ ಕೊಡುವಂಥ ಕೆಲಸ ಮಾಡಿದ್ದೇವೆ. ಇದು ಅಪ್ರಸ್ತುತ ಮತ್ತು ಇದರಲ್ಲಿ ರಾಜಕೀಯ ಬೆರೆಸಿದೆಯೆನ್ನುವ ಮಾತಲ್ಲ. ಅವರು ರಾಜಕೀಯದ ಒಂದು ತುಂಗನ್ನು ಹಿಡಿದು ಮಾತನಾಡಿದ್ದಕ್ಕಾಗಿ ಮಧ್ಯಪ್ರದೇಶ ಮತ್ತು ಹಿಮಾಚಲ ಪ್ರದೇಶ, ಕಾಂಗ್ರೆಸ್ ಅಡಳಿತವಿರತಕ್ಕ ಈ ಎರಡೂ ರಾಜ್ಯಗಳಲ್ಲಿ ಇತ್ತೀಚೆಗೆ ಪಂಚಾಯತ್ ಚುನಾವಣೆಗಳು ನಡೆದಂಥ ಸಂದರ್ಭದಲ್ಲಿ ಹಿಂದುಳಿದ ಜನಾಂಗಕ್ಕೆ ಮೀಸಲಾತಿಯನ್ನು ಕೊಟ್ಟಿಲ್ಲ. ರಾಜ್ಯಾಂಗಕ್ಕೆ 73ನೇ ತಿದ್ದುಪಡಿ ತಂದಂಥ ಸಂದರ್ಭದಲ್ಲಿ, ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಆಯಾ ಜನಸಂಖ್ಯೆಗನುಗುಣವಾದ ರೀತಿ ಇಡಬೇಕೆನ್ನುವ ಮಾತನ್ನು ಹೇಳುತ್ತಾ, ಆಯಾ ವರ್ಗಗಳಿಗೆ ಸಂಬಂಧಿಸಿದಂತೆ ಶೇಕಡ 33ರಷ್ಟನ್ನು ಮಹಿಳೆಯರಿಗಾಗಿ ಮೀಸಲಾಗಿದೆಯೆಂಬ ಮಾತನ್ನು ಹೇಳುತ್ತಿದ್ದೇವೆಯೇ ವಿನಹ, ಹಿಂದುಳಿದ ಜನಾಂಗಕ್ಕೆ ಮೀಸಲಾತಿ ನೀಡುವ ವಿಚಾರ ಆಯಾ ರಾಜ್ಯ ಸರ್ಕಾರಗಳ ವಿವೇಚನೆಗೆ ಬಿಟ್ಟಿರುವ ವಿಷಯ ಎನ್ನುವ ಮಾತನ್ನು ಬಳಸಿರುವುದರಿಂದ ಮಧ್ಯಪ್ರದೇಶ ಮತ್ತು ಹಿಮಾಚಲ ಪ್ರದೇಶದಲ್ಲಿ ನಡೆದಿರುವ ಚುನಾವಣೆಗಳಲ್ಲಿ ಹಿಂದುಳಿದ ಜನಾಂಗಕ್ಕೆ ಮೀಸಲಾತಿ ಕೊಟ್ಟಿಲ್ಲ. ಸನ್ಮಾನ್ಯ ಹಿರಿಯ ಸದಸ್ಯರಾಗಿರುವ ರಾಮಕೃಷ್ಣ ಅವರು ಈ ಪ್ರಶ್ನೆಯೆತ್ತಿ ಮಾತನಾಡಿದರು. ರಾಜಸ್ತಾನದಲ್ಲೂ ಕೂಡ ಚುನಾವಣೆಯಾಗಿದ್ದು, ಅಲ್ಲಿಯೂ ಹಿಂದುಳಿದ ಜನಾಂಗಕ್ಕೆ ಮೀಸಲಾತಿ ಕೊಟ್ಟಿಲ್ಲವೆನ್ನುವ ಒಂದು ವರದಿ ನಿಮಗೆ ಬಂದಿದೆ. ಅದರ ಸತ್ಯಾಸತ್ಯತೆ ಏನೆಂದು ನನಗೆ ಗೊತ್ತಿಲ್ಲ. ಮೀಸಲಾತಿ ಕೊಡಬಹುದು, ಎನ್ನುವ ಮಾತನ್ನು ಬಳಸಿರುವುದರಿಂದ ಕೊಡಬಹುದು ಎನ್ನುವ ಮಾತಿನಲ್ಲೇ ನಾವು ರಾಜಕೀಯ ಸಂಕಲ್ಪದ ಬಲವನ್ನು ತೋರಿಸಿದ್ದೇವೆ.

ಶ್ರೀ ವೈ. ರಾಮಕೃಷ್ಣ : ಈಗ ತೋರಿಸಿರುವುದೇನೆಂದರೆ, 'ರಾಜಕೀಯ ಆತುರತೆ' ಅವಶ್ಯಕತೆಯಿಲ್ಲದಿದ್ದರೂ ಕೂಡ ನೀವು ಛರ್ಡಿನೆನ್ಸ್ ತೆಗೆದುಕೊಂಡು ಬಂದಿರಿ. ಆರ್ಡಿನೆನ್ಸ್ ಅನ್ನು ಏಕೆ ತೆಗೆದುಕೊಂಡು ಬಂದಿರಿ?

ಶ್ರೀ ಸಿ. ಬೈರೇಗೌಡ : ಜನರು ಈಗಾಗಲೇ ತಮ್ಮ ತೀರ್ಮಾನ ಕೊಟ್ಟಿರುವುದರಿಂದ ಆ ವಿಚಾರವಾಗಿ ನೀವು ಏಕೆ ತಲೆ ಕೆಡಿಸಿಕೊಳ್ಳುತ್ತಿದ್ದೀರಿ?

ಶ್ರೀ ವೈ. ರಾಮಕೃಷ್ಣ : ಉದ್ದೇಶ ಮತ್ತು ಕಾರಣಗಳನ್ನು ಹೇಳುವಾಗ ಮೊದಲು ಪರಿಶಿಷ್ಟ ಜಾತಿ ಎಂದು ಹೇಳಲಿಲ್ಲ, 'ಎ' ಮತ್ತು 'ಬಿ' ವರ್ಗಗಳನ್ನು ಮಾತ್ರ ಹೇಳಿದರು. ಈಗ ಮೊದಲ ಸಾರಿ ಹೇಳಿತ್ತಿದ್ದಾರೆ. " I must have me say. ಇದಕ್ಕೂ ಉತ್ತರ ಕೊಡಿ, ಉತ್ತರ ಕೊಡಬಹುದಲ್ಲ. ಹಿಂದೆ ಪಂಚಾಯತ್ ಚುನಾವಣೆಗಳನ್ನು ನಡೆಸಿದಾಗ ಆಗ ಆರ್ಡಿನೆನ್ಸ್ ಇರಲಿಲ್ಲವೆಂದು ಹೇಳಿದಿರಿ. ಅದೇ ಕಾನೂನಿನಡಿಯಲ್ಲಿ ಈ ಚುನಾವಣೆಯನ್ನು ನಡೆಸಬಹುದಿತ್ತಲ್ಲ? ಗ್ರಾಮ ಪಂಚಾಯತ್ ಚುನಾವಣೆಯನ್ನು ಒಂದು ಕಾನೂನಿನಡಿಯಲ್ಲಿ ನಡೆಸುವುದರ ಬಗ್ಗೆ ನಾನು ಏನು ಹೇಳುತ್ತೇನೆಂದರೆ, ಸುಮಾರು ಒಂದು ಕೋಟಿಗೂ ಮೀರಿ ಹರಿಜನರಿಗೆ ಆಗಿರುವ ಲುಕ್ಸಾನು 5,177 ಸೀಟುಗಳು. ಇದನ್ನು ನಾನು ಕೇಳಬಾರದೇ? ಅದಕ್ಕೋಸ್ಕರ ಈ ವಿಚಾರದಲ್ಲಿ ಅನ್ಯಾಯವಾಗಿದೆಯೆಂದು ನಾನು ಒಬ್ಬನೇ ತಿಳಿಸಿಲ್ಲ,, ಎಲ್ಲಾ ರಾಜಕೀಯ ಪಕ್ಷಗಳು ತಮಗೆ ತಿಳಿಸಿವೆ, ಅದು ಕಾಂಗ್ರೆಸ್ ಇರಬಹುದು, ಸಿಪಿಐ ಇರಬಹುದು, ಎಲ್ಲಾ ಪಕ್ಷದ ಮುಖಂಡರುಗಳೂ ತಿಳಿಸಿದ್ದಾರೆ. ಇದನ್ನೆಲ್ಲಾ ನೀವು ಗಣನೆಗೆ ತೆಗೆದುಕೊಳ್ಳದೆ ಬಹಳ ಆತುರಾತುರವಾಗಿ ಆರ್ಡಿನೆನ್ಸ್ ತೆಗೆದುಕೊಂಡು ಬಂದಿರಿ. ಅದಕ್ಕೆ ನಾನು 'ರಾಜಕೀಯ ಆತುರತೆ' ಎಂಬ ಪದ ಬಳಸಿದೆ. ಅವರು ತರಬಹುದು, ಏಕೆ ತರುವುದಿಲ್ಲ? ರಾಜ್ಯಾಂಗಕ್ಕೆ 7-74ನೇ ತಿದ್ದುಪಡಿ ಬಂದ ನಂತರ ಅವರೂ ತರಭೇಕು, ಎಲ್ಲಾ ಸರ್ಕಾರಗಳೂ ತರಬೇಕು. ಈಗ ಇದರಲ್ಲಿ ಅನ್ಯಾಯವಾಗಿದೆಯೇ? ಇಲ್ಲವೇ? ಎಂಬುದನ್ನು ಪರಿಶೀಲಿಸಲು ನೀವು ಕೃಷ್ಣಸ್ವಾಮಿ ಆಯೋಗವನ್ನು ನೇಮಕ ಮಾಡಿದ್ದೀರಿ ಒಂದು ವೇಳೆ ಅನ್ಯಾಯವಾಗಿದ್ದರೆ ಯಾವ ರೀತಿ ಸರಿಪಡಿಸಬೇಕು.? ಆಯೋಗದ ವರದಿ ಬರುವ ತನಕ ನಿಮಗೇಕೆ ಆತುರ? Let us have a comprehensive view about this thing, ಒಂದು ವೇಳೆ ಅನ್ಯಾಯವಾಗಿಲ್ಲವೆಂದು ನಿಮಗೆ ಗೊತ್ತಿದ್ದರೆ, ನೀವು ಕೃಷ್ಣಸ್ವಾಮಿ ಆಯೋಗವನ್ನು ನೇಮಕ ಮಾಡುತ್ತಿರಲಿಲ್ಲ. ಅವರಿಗೆ ಅನ್ಯಾಯವಾಗಿದೆಯೆಂದು ನಿಮಗೆ ಗೊತ್ತಾಗಿದ್ದರಿಂದ ಕೃಷ್ಣಸ್ವಾಮಿ ಆಯೋಗವನ್ನು ನೇಮಿಸುದ್ದೀರಿ. ಅದರ ವರದಿ ಬರುವ ತನಕ ಕಾಯ್ದು. ವರದಿ ಬಂದ ನಂತರ ಆರ್ಡಿನೆನ್ಸ್ ತರಬಹುದಾಗಿತ್ತಲ್ಲವೇ? ಇದನ್ನೇ ನಾನು 'ರಾಜಕೀಯ ಆತುರತೆ' ಎಂದು ಹೇಳಿದೆ.

ಶ್ರೀ ಎಂ. ನಾರಾಯಣಸ್ವಾಮಿ : ಮಾನ್ಯ ಹಿರಿಯ ಸದಸ್ಯರಾದ ರಾಮಕೃಷ್ಣರವರು ರಾಜಕೀಯ ಚಿಂತನೆಯ ಧಾಟಿ ಹಿಡಿದು ಮಾತನಾಡುತ್ತಿದ್ದಾರೆ. ಅವರು ಏನು ಮಾತನಾಡುತ್ತಿದ್ದಾರೆ, ಈಗಾಗಲೇ ಅದಕ್ಕೆ ಸಂಬಂಧಿಸಿದಂತೆ ಆದೇಶಗಳಾಗಿವೆ ಆದುದರಿಂದ, ಅದರ ಬಗ್ಗೆ ಈಗ ಅವರು ಮಾತನಾಡುವುದು ಅಷ್ಟು ಸರಿಯಲ್ಲ.

ಶ್ರೀ ವೈ. ರಾಮಕೃಷ್ಣ : ಇದರಲ್ಲಿ ರಾಜಕೀಯವೇನೂ ಇಲ್ಲ. I am speaking about the Constitution. ನಾನು ತಮಗೆ ಕೇಳುತ್ತಿದ್ದೇನೆ. ಸುಪ್ರೀಂಕೋರ್ಟಿಗೆ ನಾವು ಯಾವ ಮಾತನ್ನು ಕೊಟ್ಟಿದ್ದಿರಿ, ಆ ಮಾತನ್ನು ನೆರವೇರಿಸುವುದಕ್ಕೋಸ್ಕರ ನಾವು ಈ ಆರ್ಡಿನೆನ್ಸ್‌ಅನ್ನು ತರಬೇಕಾಯಿತು ಎನ್ನುವ ಮಾತನ್ನು ತಾವು ಹೇಳುತ್ತಿದ್ದೀರಿ. ಅದೇ ಮಾತನ್ನು ತಾವು ಸುಪ್ರೀಂಕೋರ್ಟಿಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ಹೇಳಬಹುದಿತ್ತಲ್ಲ. ಇದನ್ನು ಏಕೆ ಜಾರಿಗೆ ತಂದಿರಿ? ಇಷ್ಟು ಸೀಟುಗಳು ಹೋಗುತ್ತದೆ, ಅದಕ್ಕೋಸ್ಕರ ಅವರನ್ನು ಗಣನೆಗೆ ತೆಗೆದುಕೊಳ್ಳುವುದಕ್ಕೆ ಎರಡು ದಿವಸಗಳ ಕಾಲಾವಕಾಶ ಕೊಡಿ ಎಂದು ಕೇಳಿದ್ದರೆ ಕೊಡುತ್ತಿರಲಿಲ್ಲವೇನು? ಕಾಲಾವಕಾಶ ಕೊಡುತ್ತಿದ್ದರು. Why have you not filed application before the Supreme Court for extension of time to find out the truth?

ನೀವು ಅದನ್ನು ಮಾಡಲಿಲ್ಲ. ಆದುದರಿಂದ, ನಾನು 'ರಾಜಕೀಯ ಆತುರತೆ' ಎಂದು ಹೇಳಿದ್ದುದು. ತಾವು ಭಾರೀ ಅನ್ಯಾಯ ಮಾಡಿರುವುದರಿಂದ, ಕೃಷ್ಣಸ್ವಾಮಿ ಆಯೋಗದ ವರದಿ ಬರುವ ತನಕ ಒಂದು ಸದನ ಸಮಿತಿ ಮಾಡಿ, ಅದರಲ್ಲಿ

ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು ಸೇರಿ ಒಂದು ತೀರ್ಮಾನ ತೆಗೆದುಕೊಳ್ಳಲಿ. ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಿ, ಅನಂತರ ಕರೆಯಿರಿ ಎಂದು ನಾನು ಹೇಳುವುದಿಲ್ಲ. ತಮ್ಮ ಸಮ್ಮುಖದಲ್ಲಿಯೇ ಒಂದು ಸದನ ಸಮಿತಿ ಮಾಡಿ, ಸಮಿತಿಯಲ್ಲಿ ರಾಜಕೀಯ ಮುಖಂಡರಿರುವುದರಿಂದ 'ಎ' 'ಬಿ' ವರ್ಗ ಮತ್ತು ಮೀಸಲಾತಿ ನೀತಿಗೆ ಸಂಬಂಧಿಸಿದಂತೆ ಎಲ್ಲಾ ವಿಚಾರಗಳ ಬಗ್ಗೆಯೂ ಸ್ಪಷ್ಟವಾಗಿ ಅರ್ಥ ಮಾಡಿಕೊಂಡು ನಾವು ಈ ವಿಧೇಯಕವನ್ನು ಪಾಸ್ ಮಾಡಿಕೊಡುತ್ತೇವೆ. ಅದು ಬಿಟ್ಟು ಆತುರಾತುರವಾಗಿ ನೀವೇನಾದರೂ ಹೀಗೆ ವಿಧೇಯಕವನ್ನು ಪಾಸ್ ಮಾಡಿಕೊಂಡು ಹೋದರೆ ಅನ್ಯಾಯವೆಸಗಿದಂತಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರಾದ ರಾಮಕೃಷ್ಣರವರು ಮಾತನಾಡುತ್ತಾ, ಬಹಳ ಆತುರಾತುರವಾಗಿ ನೀವು ಚುನಾವಣೆಗಳನ್ನು ನಡೆಸಿದ್ದೀರೆಂದು ಹೇಳಿದರು. ಬಹಳ ಆತುರಾತುರವಾಗಿ ಅವರು ಮಧ್ಯೆ ಪ್ರವೇಶಿಸಿದ್ದಾರೆ. ಸುಮಾರು 5-6 ಜನ ಮಾನ್ಯ ಗೌರವಾನ್ವಿತ ಸದಸ್ಯರುಗಳು ತಮ್ಮ ಪ್ರಶ್ನೆಗಳಿಗೆ ಸ್ಪಷ್ಟೀಕರಣ ಕೇಳುವಂಥ ಸಂದರ್ಭದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಎತ್ತಿದಂಥ ಕೆಲವು ಗಂಭೀರವಾದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದೆ. ಉತ್ತರ ಕೊಡುವಂಥ ಸಂದರ್ಭದಲ್ಲಿ' ನನ್ನ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ'ವೆಂದು ಅವರು ಭಾವಿಸಬೇಕಾದಂಥ, ಆತುರತೆ ತೋರಿಸಬೇಕಾದಂಥ ಅಗತ್ಯವಿರಲಿಲ್ಲ. ಅಗತ್ಯವಿರತಕ್ಕಂಥಾದ್ದು ಏನೆಂದರೆ, ನಾವು ಚುನಾವಣೆಗಳನ್ನು ಬೇಗನೆ ನಡೆಸಿದ ಉದ್ದೇಶ ಅಧಿಕಾರ ವಿಕೇಂದ್ರೀಕರಣ ನಿಜವಾಗಿಯೂ ಅರ್ಥಪೂರ್ಣ ವ್ಯವಸ್ಥೆಯಾಗಬೇಕೆಂದು. ಇನ್ನೊಂದು ವಿಚಾರವೇನೆಂದರೆ, ನಾವು ಕೃಷ್ಣಸ್ವಾಮಿ ಆಯೋಗವನ್ನು ನೇಮಕ ಮಾಡಿದ್ದೇವೆ ಎಂದು ಅವರು ಹೇಳಿದರು ಅಲ್ಲವೆ, ಆಯೋಗದ ವರದಿ ಬರುವವರೆಗಾದರೂ ತಡೆ ಹಿಡಿಯಬಹುದಾಗಿತ್ತೆಂದರು. ಅದಕ್ಕೋಸ್ಕರ ನಾವು ಕೃಷ್ಣಸ್ವಾಮಿ ಆಯೋಗವನ್ನು ನೇಮಕ ಮಾಡಿರಲಿಲ್ಲ.

ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಒಂದು ವಿಷಯ ಪ್ರಸ್ತಾಪಿಸಿದರು. ಅಂತರ್ಗತವಾಗಿರುವ ಕೆಲವು ಮೂಲಭೂತ ವೈರುಧ್ಯಗಳು ಈ ಕಾನೂನಿನಲ್ಲಿ ಅಡಗಿವೆ. ಇದರ ಬಗ್ಗೆ ಅವರು ಈಗಾಗಲೇ ಉದಾಹರಿಸಿದಂತೆ ಒಂದು ರಾಜಕೀಯ ಪಕ್ಷಕ್ಕೆ ಸೇರಿದ ಒಬ್ಬರು ಆರಿಸಿ ಬಂದರೆ, ಅನಿವಾರ್ಯವಾಗಿ ಒಬ್ಬರನ್ನೇ ಆರಿಸಿ ಕಳುಹಿಸುವಂಥ ಪ್ರಮೇಯ ಉಂಟಾಗುತ್ತದೆ. ಅದನ್ನೇ ಮಾನ್ಯ ಸದಸ್ಯರು ಉದಾಹರಣೆ ಮೂಲಕ ವಿಚಾರಗಳನ್ನು ಪ್ರಸ್ತಾಪಿಸಿದರು. ಇಂತಹ ವೈರುಧ್ಯಗಳಿಂದ ಆಡಕವಾಗಿರುವ ಎನಾಮಲೈಸ್ ಎಂದು ನಾವು ಏನು ಕರೆಯುತ್ತೇವೆ, ಅವುಗಳನ್ನು ಸರಿಪಡಿಸುವ ರೀತಿಯಲ್ಲಿ ಮತ್ತು ಅದಕ್ಕೆ ಬೇಕಾಗಿರುವ ತಮ್ಮ ಅನುಭವದ ಹಿನ್ನೆಲೆಯಲ್ಲಿ ಬೇರೆ ತಿದ್ದುಪಡಿಗಳನ್ನು ಸೂಚಿಸಬೇಕೆನ್ನುವ ಉದ್ದೇಶದಿಂದ ಕೃಷ್ಣಸ್ವಾಮಿ ಆಯೋಗವನ್ನು ನೇಮಕ ಮಾಡಿದ್ದೇವೆಂದೇ ವಿನಹ ಈ ವಿಚಾರದಲ್ಲಿ ಅವರ ವರದಿ ಬಂದ ನಂತರ ಚುನಾವಣೆ ನಡೆಸುತ್ತೇವೆನ್ನುವ ಮಾತು ಸರಿಯಲ್ಲ. ಅಲ್ಲದೆ, ಅವರು ಮಾತನಾಡುತ್ತಾ, ನೀವು ಪರಿಶಿಷ್ಟಜಾತಿ ಮತ್ತು ಪಂಗಡದವರಿಗೆ ತುಂಬಲಾರದ ಅನ್ಯಾಯ ಮಾಡಿದ್ದೀರೆಂಬ ಮಾತನ್ನು ಹೇಳಿದರು. ಇದು ಸತ್ಯಕ್ಕ ದೂರವಾದುದು. ಅಲ್ಲಿರುವುದು ಏನೆಂದರೆ, ಜನಸಂಖ್ಯೆಗನುಗುಣವಾದ ರೀತಿಯಲ್ಲಿ ಪ್ರಾತಿನಿಧ್ಯ ಕೊಡಬೇಕೆಂಬ ಮಾತು ಇದೆ. ಎಲ್ಲಿ ಜನಸಂಖ್ಯೆ ಹೆಚ್ಚಿದೆಯೋ, ಜನಸಂಖ್ಯೆಗನುಗುಣವಾದ ರೀತಿಯಲ್ಲಿ ಎಂದು ಹೇಳುವಾಗ ಮೈಸೂರು, ಕೋಲಾರ, ಗುಲ್ಬರ್ಗ, ಬೀದರ್, ಜಿಲ್ಲೆಗಳಲ್ಲಿರುವ ಆ ಜನಸಂಖ್ಯೆಯ ಹೆಚ್ಚು ಆಧಾರದ ಮೇಲೆ, ಇದನ್ನು ಉದಾಹರಣೆ ಮೂಲಕ ಹೇಳುವುದಾದರೆ ಚಿತ್ರದುರ್ಗ ಜಿಲ್ಲೆಯಲ್ಲಿ ಶೇಕಡ 18ರಷ್ಟು ಮೀಸಲಾತಿ ಪರಿಶಿಷ್ಟ ಜಾತಿಗೆ ಕೊಟ್ಟರೆ, ಶೇಕಡ 17.96ರಷ್ಟು ಮೀಸಲಾತಿಯನ್ನು ಪರಿಶಿಷ್ಟ ಪಂಗಡಕ್ಕೆ ಕೊಟ್ಟಿದ್ದೇವೆ. ಅಂದರೆ, ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಶೇಕಡ 36 ರಷ್ಟಾಗುತ್ತದೆ, ಶೇಕಡ 33ರಷ್ಟು ಹಿಂದುಳಿದ ಜನಾಂಗಕ್ಕೆ ಸೇರುತ್ತದೆ,

ಅಲ್ಲಿರುವ ಜಿಲ್ಲಾ ಪರಿಷತ್‌ನಲ್ಲಿ ಶೇಕಡ 69ರಷ್ಟು ಮೀಸಲಾತಿಯಾಗುತ್ತದೆ, ಮತ್ತು ಉಳಿದ ಎಲ್ಲಾ ವರ್ಗಗಳಿಗೂ ಕೂಡ ಶೇಕಡ 31ರಷ್ಟು ಮಾತ್ರ ಮೀಸಲಾತಿ ಇರುತ್ತದೆ. ಇದು ದೊಡ್ಡವರಾಗಿರುವ ರಾಜಕೀಯ ಮತ್ತು ಸಂಕಲ್ಪ. ಇದು ಸಾಮಾಜಿಕ ನ್ಯಾಯಕ್ಕೆ ತೋರಿಸಿಕೊಟ್ಟಿರುವ ನಿಜವಾದ ಕಳಕಳಿ ಮತ್ತು ಪ್ರತಿಕ್ರಿಯೆ. ಮಾನ್ಯ ಸದಸ್ಯರು ಹೇಳಿದಂತೆ ಅದರ ಜನಸಂಖ್ಯೆಗನುಗುಣವಾದ ರೀತಿಯಲ್ಲಿ ಹಿಂದಿನ ಕಾನೂನಿನಲ್ಲಿ ಶೇಕಡ 15ಕ್ಕಿಂತ ಕಡಿಮೆಯಿಲ್ಲ ಎನ್ನುವ ಮಾತನ್ನು ಹೇಳಿದ್ದರಿಂದ 1076 ಸ್ಥಾನಗಳನ್ನು ತುಂಬುವುದಕ್ಕೆ ಸಾಧ್ಯವಾಗದಿದ್ದ ಕಾರಣಕ್ಕೆ, ನಾವು ಅಲ್ಲಿ ಕಾಣಿಸಿರತಕ್ಕುಂಥಾದ್ದು, ಪರಿಶಿಷ್ಟ ಜಾತಿಗೆ ಸಂಬಂಧಿಸಿದಂತೆ ಶೇಕಡ 15ಕ್ಕಿಂತ ಕಡಿಮೆಯಿಲ್ಲ ಎನ್ನುವ ಮಾತನ್ನು ತೆಗೆದುಹಾಕಿದ್ದೇವೆ ಹಾಗೂ ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ ಶೇಕಡ 3ಕ್ಕಿಂತ ಕಡಿಮೆ ಇಲ್ಲದಂತೆ ಎನ್ನುವ ಮಾತನ್ನು ನಾವು ಹೇಳಿದ್ದೇವೆ. ಇದರ ಮೂಲಕ ಅವರಿಗೆ ದೊಡ್ಡ ಅನ್ಯಾಯವಾಗಿದೆ ಎನ್ನುವ ಅವರ ಮಾತಿಗೆ ಹೇಳುವುದಾದರೆ ಮತ್ತು ಇದಕ್ಕೆ ಸಂಬಂಧಪಟ್ಟ ಕೆಲವು ಉದಾಹರಣೆಗಳನ್ನು ಹೇಳುವುದಾದರೆ ಬೆಂಗಳೂರು ನಗರದಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆಗೆ ಕೊಟ್ಟಿರುವುದು ಶೇಕಡ 27.77, ಬೆಂಗಳೂರು ಗ್ರಾಮಾಂತರದಲ್ಲಿ ಶೇಕಡ 21.5, ಚಿತ್ರದುರ್ಗದಲ್ಲಿ ಶೇಕಡ 21.73, ಕೋಲಾರದಲ್ಲಿ ಶೇಕಡ 26, ಶಿವಮೊಗ್ಗದಲ್ಲಿ ಶೇಕಡ 19.20 ಮೈಸೂರಿನಲ್ಲಿ ಶೇಕಡ 21.87ರಷ್ಟಿದೆ. ಬೀದರ್‌ನಲ್ಲಿ 24.13, ಗುಲ್ಬರ್ಗಾದಲ್ಲಿ 25.45 ಇದೆ. ಅದೇ ರೀತಿ ಪರಿಶಿಷ್ಟ ಪಂಗಡದವರಿಗೆ ಚಿತ್ರದುರ್ಗದಲ್ಲಿ 17.39, ಬಳ್ಳಾರಿಯಲ್ಲಿ 10.52, ಬೀದರ್‌ನಲ್ಲಿ 10.34 ಇದೆ ಅಂದರೆ ಅಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಇಟ್ಟಿರುತ್ತೇವೆ.

ಶ್ರೀ ಬಸವರಾಜ : ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಒಂದು ನಿಮಿಷ ಈಲ್ಡ್ ಆಗುವುದಾದರೆ, ತಾವು ಜನಸಂಖ್ಯೆಯ ಆಧಾರದ ಮೇಲೆ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ, ಈಗ ಚಿತ್ರದುರ್ಗ ಜಿಲ್ಲೆಗೆ ಕೊಟ್ಟಿದ್ದೀರಿ, ಅಲ್ಲಿಯ ಜನರು ಊಟ ಮಾಡಿದರೆ, ಬೆಂಗಳೂರಿನ ಜನರು ಊಟ ಮಾಡಿದಂತಾಗುತ್ತದೆಯೆ? ತಾವು ಅನ್ಯಾಯವನ್ನು ಮಾಡಿದ್ದೀರಿ, ಅದರೆ, ನಾಮಕರಣವನ್ನು ಮಾಡುವಾಗ ನೀವು ಎಲ್ಲಿ ಅನ್ಯಾಯ ಮಾಡಿದ್ದೀರಿ ಅಲ್ಲಿಗೆ ಪರಿಶಿಷ್ಟ ಪಂಗಡದವರನ್ನೇ ನಾಮಕರಣ ಮಾಡಿ, ಈ ರೀತಿ ಮಾಡಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇದಲ್ಲದೆ ಬೇರೆ ಯಾವ ರೀತಿಯಿಂದಲೂ ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲ. ತಮಗೆ ಪರಿಶಿಷ್ಟ ಪಂಗಡದವರ ಬಗ್ಗೆ ಕಾಳಜಿ ಇದೆ ಎನ್ನುವುದಾದರೆ ಅವರನ್ನು ಅಲ್ಲಿಗೆ ನಾಮಕರಣ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಒಂದು ವಿಚಿತ್ರವಾದ ಸಂಗತಿ ಏನೆಂದರೆ, ಪರಿಶಿಷ್ಟ ಪಂಗಡವೆಂದರೆ ನಮ್ಮದೇ ಗುತ್ತಿಗೆ ಎಂದು ಇನ್ನೊಬ್ಬರು ಸದಸ್ಯರು ಭಾವಿಸಿವುದು ಆಗಿದೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ : ನಾವು ಆ ರೀತಿ ಭಾವಿಸಬೇಡವೆ?

+ Sri M.P. Prakash: Madam, we have heard you. Please allow me to say my say. Reward and repartee in a democractic system is absolutely necessary.

ನಿದ್ದೆ ಬಂದವರಿಗೆ ನಾವು ನಿಲ್ಲಿಸಬಹುದು, ಆದರೆ ನಿದ್ದೆ ಬಂದಂತೆ ನಟಿಸುವಂಥವರನ್ನು ಯಾರ ಕೈಯಿಂದಲು ಎಬ್ಬಿಸಲು ಸಾಧ್ಯವಿಲ್ಲ. ಅವರು ತಾತ್ವಿಕವಾಗಿ ಒಪ್ಪತಕ್ಕ ಮನಸ್ಸು ಇದ್ದರೆ, ಅದನ್ನು ಒಪ್ಪಿಸತಕ್ಕ ಪ್ರಯತ್ನ ಮಾಡುವುದಿಲ್ಲ.

ಅವರೇನು ಪರಿಶಿಷ್ಟ ಪಂಗಡದ ಮಾತನಾಡಿದ್ದಾರೆ, ಈ ಪಂಗಡದಲ್ಲಿ ಯಾರು ಇರಬೇಕು ಎನ್ನುವ ವಿಚಾರದಲ್ಲಿ ನಮ್ಮ ಸರ್ಕಾರ ಬರುವವರೆಗೆ ಸಹ ಕೇಂದ್ರ

ಸರ್ಕಾರ ಇದರ ಬಗ್ಗೆ ಒಂದು ಪಾರಿಭಾಷಿಕ ಶಬ್ದಗಳನ್ನು ಬದಲು ಮಾಡಲಿ ತಯಾರಾಗಿರಲಿಲ್ಲ. ನಾವು ವಾಲ್ಮೀಕಿ, ನಾಯಕ ಎಂದರೆ ಬೇರೆ, ವಾಲ್ಮೀಕಿ, ಪರಿವಾರ, ವಾಲ್ಮೀಕಿ ಮಕ್ಕಳು, ಈ ವಿಚಾರಗಳ ಪಾರಿಭಾಷಿಕ ಶಬ್ದಗಳನ್ನು ನಾವು ಶಿಫಾರಸ್ಸು ಮಾಡಿ ಅಂದು ಕೇಂದ್ರ ಸರ್ಕಾರಕ್ಕೆ ಕಳುಸಿಕೊಟ್ಟಿದ್ದೇವೆ. ಮಾನ್ಯ ಚಂದ್ರಶೇಖರ್‌ರವರು ಪ್ರಧಾನ ಮಂತ್ರಿಗಳಾಗಿದ್ದಾಗ ಇದರ ಬಗ್ಗೆ ಆಜ್ಞೆ ಹೊರಬಿತ್ತೆ ದಿನದ ಅಲ್ಲಿಯವರೆಗೆ ಇದರ ಬಗ್ಗೆ ಯಾರು ಕೂಡ ಪ್ರಶ್ನೆ ಮಾಡುವುದಕ್ಕೆ ಸಾಧ್ಯವೇ ಆಗಿರಲಿಲ್ಲ. ಆದುದರಿಂದ ಚಂದ್ರಶೇಖರ್‌ರವರು ಹೊರಡಿಸಿರತಕ್ಕ ಪ್ರಕಟಣೆಯಲ್ಲಿಯೂ ಸಹ ಸಮಾನ ಪದಗಳ ವಿಚಾರದಲ್ಲಿ ಒಕ್ಕಲು ಮತ್ತು ವಾಲ್ಮೀಕಿ ಮಕ್ಕಳು ಎಂದು ಹೇಳತಕ್ಕ ಶಬ್ದದ ಪ್ರಯೋಗವನ್ನು ಕೈಬಿಡಲಾಗಿದೆ.ಇದರ ಜೊತೆಗೆ ನಾವು ತಂದಿರತಕ್ಕ ಕಾನೂನಲ್ಲ. ಕಾನೂನಿನ ಎರಡನೆ ವಿಧಿ ನಿಯಮದಲ್ಲಿ ಪಾಪ್ಯುಲೇಷನ್ means the population as ascertained at the last preceeding Cebsus for which the relative have been published ಎನ್ನತಕ್ಕ ಮಾತು ಇದೆ. ಅಂದರೆ ಜನಸಂಖ್ಯೆ ಎಂದರೆ ನಮಗೆ ತಿಳಿದಿರತಕ್ಕಂಥ ಜನಸಂಖ್ಯೆಯಲ್ಲ. 1991ರ ಜನಸಂಖ್ಯೆಯ ಗಣತಿಯ ಆಧಾರದ ಮೇಲೆ, ಯಾವ ಜನಸಂಖ್ಯೆ ಎಂಬುದು ನಮೂದಿಸಲ್ಪಟ್ಟಿದೆ ಅದು ಜನಸಂಖ್ಯೆಯೆಂದು ಭಾವಿಸಬೇಕೆಂದು ಕಾಯಿಲೆ ಇದೆ. ಅದರ ಪ್ರಕಾರ ಇರತಕ್ಕದ್ದರಲ್ಲಿ ಈ ಏನೇನು ನ್ಯೂನತೆಗಳಿವೆ, ಅಂದರೆ ನಾವು ಶಿಫಾರಸ್ಸು ಮಾಡಿ ಕಳಿಸಿರುವುದರ ಮೇಲೆ ಚಂದ್ರಶೇಖರ್‌ರವರ ಸರ್ಕಾರ 1992-93ರ ಸಾಲಿನಲ್ಲಿತ್ತು. ಆದುದರಿಂದ 1991ನೇ ಜನಗಣತಿಯ ಸಾಲಿನಲ್ಲಿ ಇವರ್ಯಾರು ಪರಿಶಿಷ್ಟ ವರ್ಗದವರಾಗಿರಲಿಲ್ಲ. ಆದರೆ ಗೋಕಾಕು ಮತ್ತು ಕೊಡಗಿನ ಪ್ರದೇಶವನ್ನು ಬಿಟ್ಟು ಉಳಿದವರ್ಯಾರು ಸಹ ಪರಿಶಿಷ್ಟ ವರ್ಗದವರಾಗಿರಲಿಲ್ಲ. ಈ ರೀತಿ ಜನಗಣತಿಯಲ್ಲಾಗಿರತಕ್ಕಂಥ ನ್ಯೂನತೆಯನ್ನು ಸರಿಪಡಿಸಿರತಕ್ಕದ್ದು ಕೇಂದ್ರದ ಆಜ್ಞೆಯ ಮೂಲಕ ಆ ಆಜ್ಞೆಯು ಸಹ ಪ್ರಕಟಿತವಾಗಿ ಹೊರಗೆ ಬರುವಾಗ ಎರಡು ಶಬ್ದಗಳು ಬಿಟ್ಟು ಹೋಗಿದೆ. ಅದರ ಪ್ರಕಾರ 1991ರ ಜನಗಣತಿಯಲ್ಲಿ ಕಾರವಾರದಲ್ಲಿ 93 ಜನ, ಕುಮಟಾದಲ್ಲಿ 3 ಜನ, ಅಂಕೋಲದಲ್ಲಿ 15 ಜನ, ಹೊನ್ನಾವರದಲ್ಲಿ 12 ಜನ, ಸಿದ್ದಾಪುರದಲ್ಲಿ 76 ಜನ, ಜೊಡಾದಲ್ಲಿ 378 ಜನ, ಅಳಿಯಾಳದಲ್ಲಿ 374 ಜನ, ಯಲ್ಲಾಪುರದಲ್ಲಿ 137 ಜನ ಇವರುಗಳು ಪರಿಶಿಷ್ಟ ವರ್ಗದವರೆಂದು ಜನಗಣತಿಯಲ್ಲಿ ಅವರು ಮಾಡಿದ್ದಾರೆ. ಇದು ತಪ್ಪಾಗಿರುವಂಥ ವರದಿಯಾಗಿರಬಹುದು. ನಮ್ಮ ದೃಷ್ಟಿ ಕೋನದಲ್ಲಿ ನಮ್ಮ ಅನುಭವದಲ್ಲಿ ಇದು ಸರಿಯಾಗಿರದಾಗಿರಬಾರದು, ಆದರೆ ನಾವು ಇಲ್ಲಿ ನಿಯಮಾವಳಿಗಳನ್ನು ರಚಿಸಿಕೊಂಡು ಹೋಗುವಾಗ 1991ರ ಜನಗಣತಿಯಲ್ಲಿ ಕಾಣಿಸಿರುವಂಥ ಅಂಕಿ ಸಂಖ್ಯೆಗಳ ಮೇಲೇಯೆ ನಾವು ಆಧಾರ ಪಡಬೇಕೆ ಹೊರತು, ನಮಗೆ ಬೇರೆ ಆಧಾರವಿಲ್ಲ. ಆ ಕಾರಣ ಪರಿಶಿಷ್ಟ ಜಾತಿಗೆ ನೀವೇನು ಮೀಸಲಾತಿಯಲ್ಲಿ ಬಹಳ ದೊಡ್ಡ ಅನ್ಯಾಯವನ್ನು ಮಾಡಿದ್ದೀರಿ ಎನ್ನತಕ್ಕ ಮಾತುಗಳನ್ನಾಡಿದ್ದೀರಿ, ಅದು ಒಪ್ಪಲಾರದಂಥ ಮಾತು.

175 ತಾಲ್ಲೂಕು ಪಂಚಾಯಿತಿಗಳಲ್ಲಿ 18.08ರಷ್ಟು ಪರಿಶಿಷ್ಟ ಜಾತಿಯವರಿಗೆ ಕೊಟ್ಟಿದ್ದೇವೆ, ಪರಿಶಿಷ್ಟ ಪಂಗಡದವರಿಗೆ 5.5ರಷ್ಟು ಕೊಟ್ಟಿದ್ದೇವೆ. ಪರಿಶಿಷ್ಟ ಪಂಗಡಕ್ಕೆ 15.11ರಷ್ಟು ಕೊಟ್ಟಿದ್ದೇವೆ. ಒಟ್ಟಿನಲ್ಲಿ ತಾಲ್ಲೂಕು ಪಂಚಾಯಿತಿಗಳಲ್ಲಿ 23.13ರಷ್ಟು ಜಿಲ್ಲಾ ಪಂಚಾಯತ್‌ಗಳಲ್ಲಿ 23.06ರಷ್ಟು ಕೊಟ್ಟಿದ್ದೇವೆ. ಇವತ್ತು 20 ಜಿಲ್ಲಾ ಪರಿಷತ್‌ನಲ್ಲಿ 4 ಪರ್‌ಸೆಂಟ್ ಅಂದರೆ ನಾಲ್ಕು ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಸ್ಥಾನಗಳನ್ನು ಪರಿಶಿಷ್ಟ ಜಾತಿಯವರಿಗೆ ಕೊಟ್ಟಿದ್ದೇವೆ. ಒಂದು ಪರ್ಸೆಂಟ್ ಪರಿಶಿಷ್ಟ ಪಂಗಡದವರಿಗೆ ಹೋಗುತ್ತದೆ. 6 ಪರ್ಸೆಂಟ್'ಎ' ವರ್ಗದಲ್ಲಿರುವವರಿಗೆ, 1 ಪರ್ಸೆಂಟ್ 'ಬಿ' ವರ್ಗದಲ್ಲಿರುವವರಿಗೆ 6 ಸಾಮಾನ್ಯ ವರ್ಗದವರಿಗೆ ಹೋಗುತ್ತದೆ, 73ನೇ ಕಾನೂನಿನ ತಿದ್ದುಪಡಿಯಲ್ಲಿ ಶ್ರೀಮತಿ [illegible] ಹೇಳಿದಂತೆ there shall be a reservation for the

women i.e., 33% in each of the category ಎನ್ನತಕ್ಕ ಪದವನ್ನು ಬಳಸಿದ್ದಾರೆ. ಪ್ರತಿಯೊಂದು ಕ್ಯಾಟಗರಿಯಲ್ಲಿ ಒಂದನೆ ಮೂರು ಭಾಗವನ್ನು ಸೇರಿಸಿದಾಗ, ಒಂದು ಸ್ಥಾನ ಮೀಸಲಾಗಿದ್ದರೆ ಅದರಲ್ಲಿ ಒಂದನೆ ಮೂರು ಭಾಗವೆಂದು ಏನು ಇದೆ ಅದನ್ನು ವಿಧಿಸಲು ಬರುವುದಿಲ್ಲ. ಆ ರೀತಿ ವಿಧಿಸಲು ಬರಲಾರದಂಥ ಆ ಒಂದನ್ನು ನಾವು ಮಹಿಳೆಯರಿಗೇ ಕೊಟ್ಟಿರುವುದರಿಂದ ಅವರು ನಮ್ಮನ್ನು ಅಭಿನಂದಿಸಬೇಕಾಗಿತ್ತು. ನಾವು ಮಹಿಳೆಯರಿಗೆ ತಾಲ್ಲೂಕು ಪಂಚಾಯಿತಿಗಳಲ್ಲಿ 40 ಕ್ಕಿಂತ ಹೆಚ್ಚು ಮೀಸಲಾತಿಯನ್ನು ಜಿಲ್ಲಾ ಪಂಚಾಯತ್‌ನಲ್ಲಿ 36ಕ್ಕಿಂತ ಹೆಚ್ಚು ಕೊಟ್ಟಿದ್ದೇವೆ. ಆದುದರಿಂದ ಮಹಿಳೆಯರ ಸ್ಥಾನಮಾನ ಯಾವ ದೃಷ್ಟಿಯಿಂದಲೂ ಸಹ ಕಡಿಮೆಯಾಗಿಲ್ಲ. ಈ ಎಲ್ಲಾ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ವಾದಗಳಿವೆ, ಇದರಲ್ಲಿ ಯಾವುದನ್ನು ಪುರಸ್ಕರಿಸಬೇಕು ಎಂಬುದು ರಾಷ್ಟ್ರೀಯವಾದಂಥ ಚರ್ಚೆಗೆ ಅನುಗುಣವಾದಂಥದ್ದು. ಜನರು ಇದಕ್ಕಾಗಿಯೇ ತೀರ್ಮಾನವನ್ನು ಕೊಟ್ಟಿದ್ದಾರೆ. ಚುನಾವಣೆಯ ಸಮಯದಲ್ಲಿ ರಾಜಕೀಯ ಮತ್ತು ಇತರೆ ಕಾರಣಕ್ಕಾಗಿ ಈ ವಿಷಯವನ್ನು ಬಳಸಲು ಪ್ರಯತ್ನ ಮಾಡಿದರು. ಆ ರೀತಿ ಅದನ್ನು ಬಳಸಿರುವುದರಲ್ಲಿ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿದೆ ಎನ್ನುವುದು ತಮಗೆಲ್ಲರಿಗೆ ವೇದ್ಯವಾಗಿರತಕ್ಕಂಥ ವಿಚಾರ.

ಶ್ರೀ ಕೆ.ಎನ್. ಪುಟ್ಟಣ್ಣಯ್ಯ (ಪಾಂಡವಪುರ) : ಸನ್ಮಾನ್ಯ ಉಪಾಧ್ಯಕ್ಷರೆ, ಮೀಸಲಾತಿ ಬೇಕೆ ಬೇಕು ಅದರ ಬಗ್ಗೆ ಎರಡು ಮಾತಿಲ್ಲ. ಗ್ರಾಮಪಂಚಾಯಿತಿ ಚುನಾವಣೆಯಲ್ಲಿ ಯಾವುದೆ ಪಕ್ಷ, ಚಿನ್ಹೆ ಇಲ್ಲದೆ ಎಲ್ಲರು ಇಂಡಿಪೆಂಡೆಟ್ ಎಂದು ಗೆದ್ದರೆ ಆಗ ಮೀಸಲಾತಿಯ ಸಮಸ್ಯ ಬರುವುದಿಲ್ಲ. ಆದರೆ ಈಗ ಚಿನ್ಹೆಯ ಮೇಲೆ ಗೆದ್ದಿದ್ದಾರೆ. ಒಂದು ಕಡೆ ಬೇರೆ ಪಕ್ಷದ 6 ಜನರಿರುತ್ತಾರೆ, ಇನ್ನೊಂದು ಬೇರೆ ಪಕ್ಷದವರು 8 ಜನರು ಇರುತ್ತಾರೆ. ತಾವೇನು ಮೀಸಲಾತಿಯನ್ನು ನಿಗದಿ ಮಾಡುತ್ತೀರಿ ಆ 8 ಜನರಿರತಕ್ಕ ಅಭ್ಯರ್ಥಿಗಳು ಇರುವುದಿಲ್ಲ. ಈ 6 ಜನರಿರುವ ಪಕ್ಷದ ಅಭ್ಯರ್ಥಿಗಳಿರುತ್ತಾರೆ. ಆಗ ಯಾವ ರೀತಿಯಲ್ಲಿ ಉತ್ತಮವಾಗಿ ಆ ಪಂಚಾಯಿತಿ ನಡೆಯಬಹುದು? ಅದರ ಬಗ್ಗೆ ತಾವು ದಯವಿಟ್ಟು ಪರಿಶೀಲನೆ ಮಾಡಬೇಕು.

ಉಪಾಧ್ಯಕ್ಷರು : ಇದೇ ಅಂಶವನ್ನು ಶ್ರೀ ರಾಮರೆಡ್ಡಿಯವರು ಹೇಳಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್ : ಸನ್ಮಾನ್ಯ ಉಪಾಧ್ಯಕ್ಷರೆ, ತಮ್ಮ ಮಾತನ್ನು ಕೇಳಿದಮೇಲೆ ಮೀಸಲಾತಿಯನ್ನು ತಮ್ಮ ಪಕ್ಷವೇ ತಂದಿದೆ ಎನ್ನುವ ಭಾವನೆ ಮೂಡುವ ರೀತಿಯಲ್ಲಿ ತಾವು ಈ ಕೆಲಸಕ್ಕೆ ತಿಳಿಸಿದ್ದರು. ಮೀಸಲಾತಿ ಬಂದದ್ದು ಘಟನೆ ತಿದ್ದುಪಡಿಯಿಂದ. ಆ ರೀತಿ ಘಟನೆ ತಿದ್ದುಪಡಿಯನ್ನು ಮಾಡಿದ್ದು ಕಾಂಗ್ರೆಸ್ ಸರ್ಕಾರ. 1989ರಲ್ಲಿ ಈ ರೀತಿ ಘಟನಾ ತಿದ್ದುಪಡಿಯನ್ನು ಮೀಸಲಾತಿಯ ಸಲುವಾಗಿ ಕಾಂಗ್ರೆಸ್ ಸರ್ಕಾರ ತರುವಾಗ,ನಿಮ್ಮ ಪಕ್ಷ ಆ ಘಟನಾ ತಿದ್ದುಪಡಿಯನ್ನು ರಾಜ್ಯಸಭೆಯಲ್ಲಿ ಸೋಲಿಸಿತ್ತು ಎನ್ನುವುದು ತಮಗೆ ತಿಳಿದಿರಬಹುದು. ಆದರೆ ತಾವು 'ಅ' ಮತ್ತು 'ಬ' ಎಂದು ವಿಭಾಗ ಮಾಡಿ ನಿಜವಾಗಿಯು ಹಿಂದುಳಿದವರಿಗೆ 8 ರ ಪರ್ಸೆಂಟ್ ಮೀಸಲಾತಿಯನ್ನು, ಅಲ್ಲಿ ಅವರಿಗೆ -ಹೆಚ್ಚು ಅನುಕೂಲವಾಗತಕ್ಕ ಒಂದು ಕೆಲಸವನ್ನು ನಮಗಿಂತ ಒಂದು ಹೆಜ್ಜೆ ಮುಂದೆ ಇಟ್ಟು ಅನುಕೂಲ ಮಾಡಿಕೊಟ್ಟಿದ್ದೀರಿ. ಆದರೆ ಮೀಸಲಾತಿಯನ್ನು ಜಾರಿಗೆ ತಂದಂಥ ಹೆಗ್ಗಳಿಕೆ ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಸಲ್ಲಬೇಕೆ ಹೊರತು ಮತ್ತಾವ ಪಕ್ಷಕ್ಕೂ ಅಲ್ಲ. ಆದರೆ ಜನಸಂಖ್ಯೆಯ ಆಧಾರದ ಮೇಲೆ ನೀವು ಹೆಣ್ಣುಮಕ್ಕಳಿಗೆ ಮೀಸಲಾತಿಯನ್ನು ಕೊಟ್ಟಿದ್ದು, ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಕೊಟ್ಟಿದ್ದು ಎಲ್ಲರು ಸಹ ಘಟನಾವಳಿಯಲ್ಲಿಯೇ ಇದೆ. ಅದು ನಿಮ್ಮ ಸಾಧನೆಯಲ್ಲಿ ಘಟನೆಯಲ್ಲಿದ್ದದ್ದನ್ನು ತಾವು ಕೊಟ್ಟಿದ್ದೀರಿ.

ಶ್ರೀ ಎಂ,ಡಿ, ಪ್ರಕಾಶ್ : ನನ್ನ ವಾದದ, ತರ್ಕದ ಬಲವನ್ನು ಹಿರಿಯ ಸದಸ್ಯರಾದಂಥ ಕಾಗೋಡು ತಿಮ್ಮಪ್ಪನವರು ಅದಕ್ಕೆ ಹೆಚ್ಚು ಒತ್ತನ್ನು ಕೊಡುವ ಪ್ರಯತ್ನವನ್ನು ಮಾಡಲಿಲ್ಲ. ಅದರೆ ಡಿ.ಆರ್. ಪಾಟೀಲರು ಒಂದನ್ನು ಮೆಚ್ಚಿ ಮತ್ತೊಂದಕ್ಕೆ ತಾವೇ ಶಹಭಾಸ್‌ಗಿರಿಯನ್ನು ತೆಗೆದುಕೊಳ್ಳಲು ಹೋಗಿದ್ದಾರೆ. ಈ ವಿಚಾರದಲ್ಲಿ ನಾನು ಬೇರೆ ಮಾತನ್ನು ಹೇಳುವುದಿಲ್ಲ.ಇದರಲ್ಲಿ ಅವರ ಪಕ್ಷವೇ ಆಗಿರಲಿ ಅಥವಾ ಬೇರೆ ಪಕ್ಷದವರೆ ಆಗಿರಲಿ ಮೀಸಲಾತಿಯು ಒಂದು ಪಕ್ಷಕ್ಕೆ ಸೀಮಿತವಾದುದಲ್ಲ. ಮತ್ತು ನೂರಾರು -ವರ್ಷಗಳಿಂದ ಯಾರು ತಮ್ಮ ತುಳಿತಕ್ಕೆ ಒಳಗಾಗಿರತಕ್ಕಂತಹ ಜನಾಂಗ, ತನ್ನ ಪ್ರಜ್ಞೆಯನ್ನು ಮೂಡಿಸಿಕೊಂಡಿರತಕ್ಕಂತಹ ಜನಾಂಗ ತನ್ನ ಎಲ್ಲಾ ಶಕ್ತಿಯನ್ನು ಮತ್ತು ಹೋರಾಟವನ್ನು ಅಂತರ್ಗತಗೊಳಿಸಿಕೊಳ್ಳುವುದರ ಮೂಲಕವಾಗಿ ಹೋರಾಟ ಮಾಡುತ್ತದೆ. ಈ ಹಿನ್ನಲೆಯಲ್ಲಿ ಮಂಡಲ ಆಯೋಗಕ್ಕೆ ಚಾಲನೆಯನ್ನು ಕೊಟ್ಟು ಮಾಡಿರತಕ್ಕಂಥದ್ದು ಮಾನ್ಯ ವಿ.ಪಿ. ಸಿಂಗ್‌ರವರ ಸರ್ಕಾರ. ಅಲ್ಲಿಯವರೆಗೆ ಕೇವಲ ಧೂಳು ಹಿಡಿದು ಬಿದ್ದಿರತಕ್ಕಂತಹ ಮಂಡಲ ಆಯೋಗದ ವರದಿಯ ಬಗ್ಗೆ ಮಾನ್ಯ ಸದಸ್ಯರು ಸ್ವಲ್ಪ ಯೋಚನೆ ಮಾಡಲಿ.

ಶ್ರೀ ಡಿ.ಆರ್. ಪಾಟೀಲ್ : ಮಂಡಲ ಆಯೋಗ ಬರುವುದಕ್ಕಿಂತ ಮೊದಲು ಕರ್ನಾಟಕದಲ್ಲಿ ಮೀಸಲಾತಿಯನ್ನು ತಂದಂತಹ ಶ್ರೇಯಸ್ಸು ದಿವಂಗತ ದೇವರಾಜ ಅರಸರದ್ದು. ಮತ್ತು ಕಾಂಗ್ರೆಸ್ ಸರ್ಕಾರದ್ದು. ಅದು ತಮ್ಮ ಗಮನದಲ್ಲಿರಬೇಕು.

ಶ್ರೀ ಹೆಚ್.ಡಿ. ಬಸವರಾಜು : 1976ರಲ್ಲಿ ದಿವಂಗತ ದೇವರಾಜ ಅರಸುರವರು ಈ ತಿದ್ದುಪಡಿ ತೆಗೆದುಕೊಂಡು ಬಂದರು, ಅದನ್ನು ಕೆ.ಟಿ. ರಾಥೋಡ್‌ರವರು ಈ ಸದನದಲ್ಲಿ ಹೇಳಿದರು. ಅದನ್ನು ಮಾನ್ಯ ಸಚಿವರು ಪರಿಗಣನೆಗೆ ತಂದುಕೊಂಡಿದ್ದಾರೋ? ಬರೀ ಜನತಾ ದಳದವರು ಮಾತ್ರ ಅವರ ಬಗ್ಗೆ ಗುತ್ತಿಗೆ ಹಿಡಿದಿದ್ದಾರೆ ಅವರು ಮಾತ್ರ ಮಾತನಾಡುವುದಕ್ಕೆ ಅವಕಾಶ ಇದೆ ಎನ್ನುವುದು ಸರಿಯಲ್ಲ. ಅದು ತಪ್ಪು ಎಂದು ನಾನು ಹೇಳುತ್ತಿದ್ದೇನೆ. ಏಕೆಂದರೆ ನಮಗೆ ಆಗುತ್ತಿರುವ ಅನ್ಯಾಯವನ್ನು ಬೇರೆಯವರು ಯಾರೂ ಎತ್ತಿ ಹಿಡಿದು ಮಾತನಾಡುತ್ತಿಲ್ಲ, ನಾನು ಮಾನ್ಯ ಸಚಿವರಿಗೆ ಸಲಹೆ ಕೊಡುತ್ತೇನೆ, ಎಲ್ಲೆಲ್ಲಿ ಬಿಟ್ಟು ಹೋಗಿದ್ದಾರೋ ಅಲ್ಲಲ್ಲಿ ನಾಮಕರಣ ಮಾಡಿ ಪರಿಶಿಷ್ಟ ಪಂಗಡದವರು ಬೇಕಾದಷ್ಟು ಜನರಿದ್ದಾರೆ ಅವರಿಗೆ ಅನ್ಯಾಯ ಆಗಿರುವುದನ್ನು ಸರಿಪಡಿಸಿ ಎಂದು ನಾನು ಕೇಳಿಕೊಂಡೆನೇ ವಿನಃ ಬರೀ ಗುತ್ತಿಗೆ ಹಿಡಿದುಕೊಂಡಿದ್ದೇವೆಂದು ಹೇಳುವುದು ಸರಿಯಲ್ಲ. ಅವರೇ ಗುತ್ತಿಗೆ ತೆಗೆದುಕೊಳ್ಳಲಿ ಬೇಡ ಎಂದು ಹೇಳುವುದಿಲ್ಲ. ಈ ಗುತ್ತಿಗೆಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಅಧ್ಯಕ್ಷರ ಸ್ಥಾನ, ಉಪಾಧ್ಯಕ್ಷರ ಸ್ಥಾನಕ್ಕೆ ಹೀಗೆ ಮೀಸಲಾತಿ ಮಾಡಿದರೆ ಇದರಿಂದ ಯಾವ ರೀತಿ ಉಪಯೋಗ ಆಗುತ್ತದೆ ಎನ್ನುವುದನ್ನು ಹೇಳಿ ಅಷ್ಟು ಸಾಕು.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೆ, ಇದರಲ್ಲಿ ನಾನು ಹೆಚ್ಚು ಬೆಳಸುವಂತಹ ಪ್ರಯತ್ನ ಮಾಡುವುದಿಲ್ಲ; ಯಾರೂ ಇದರ ಹೋರಾಟದ ಮುಂಚೋಣಿಯಲ್ಲಿ ಇದ್ದರು ಎನ್ನುವುದು ಪ್ರಶ್ನೆ ಅಲ್ಲ. ಈ ರೀತಿ ಪ್ರಜ್ಞೆ ಬರಲಿಕ್ಕೆ ಪ್ರಯತ್ನ ಆಗಿರತಕ್ಕಂಥಾದ್ದು, ಕಾಕಾ ಕಾಲೇಲ್ಕರ್ ಆಯೋಗ ನೇಮಕವಾದ ಸಂದರ್ಭದಲ್ಲಿ ಎನ್ನುವುದೂ ಕೂಡ ನೆನಪು ಇದೆ. 1977ರಲ್ಲಿ ಮುರಾರ್ಜಿ ದೇಸಾಯಿಯವರು ಪ್ರಧಾನ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಆಗ ಈ ಮಂಡಲ ಆಯೋಗದ ವರದಿಯನ್ನು ಮಾಡಿ, ಹಿಂದುಳಿದ ಜನಾಂಗಕ್ಕೆ ಮೀಸಲಾತಿ ಕೊಡುವಂತಹ ವಿಚಾರದಲ್ಲಿ ಒಂದು ಪ್ರಥಮ ಪ್ರಯತ್ನವಾಗಿರುವಂತಾದ್ದು. ಹಿಂದೆ ಶ್ರೀಮಾನ್ ದಿವಂಗತ ದೇವರಾಜ

ಅರಸುರವರು, ಹಿಂದುಳಿದ ಜನಾಂಗಕ್ಕೆ ಮೀಸಲಾತಿಯನ್ನು ಮಾಡಿರತಕ್ಕದ್ದು ಒಂದೇ ಪ್ರಶ್ನೆ ಅಲ್ಲ, ಅವರು ಇಡೀ ಜನಾಂಗಕ್ಕೆ ಆತ್ಮ ಗೌರವ ಮತ್ತು ಆತ್ಮ ಸ್ಥೈರ್ಯವನ್ನು ತಂದು ಕೊಟ್ಟಿರತಕ್ಕಂಥಾದ್ದು. ಆ ಮೂಲಕವಾಗಿ ಕೂಡ ಇತಿಹಾಸದಲ್ಲಿ ಈಗಾಗಲೇ ದಾಖಲೆ ಆಗಿರತಕ್ಕಂಥಾದ್ದು. ಅದರ ಬಗ್ಗೆ ಉತ್ಪ್ರೇಕ್ಷೆಯ ಮಾತಿಲ್ಲ. ಸನ್ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಅವರು ಏನು ಹೇಳಿದರು ನಾವು ದಿವಂಗತ ದೇವರಾಜ ಅರಸುರವರ ಮೀಸಲಾತಿಯ ಕ್ರಮ ಮತ್ತು ಭೂ ಸುಧಾರಣೆಯ ಕಾಯಿದೆ ಕ್ರಮಕ್ಕೆ ಯಾರು ವಿರೋಧಿಸಿದವರು ಎನ್ನುವುದು ಮಾನ್ಯ ಪಟೇಲರಿಗೆ ಗೊತ್ತಿದೆ. ಅದರಿಂದ ಅವರ ಬಗ್ಗೆ ನಾನು ಹೆಚ್ಚು ಚರ್ಚೆಯನ್ನು ಮಾಡದೆ ಇದು ಬಹಳ ಮುಖ್ಯವಾಗಿರುವಂತಹ ಪ್ರಶ್ನೆ. ಮತ್ತು ಈಗಾಗಲೇ ಚುನಾವಣೆಗಳು ಆಗಿ ಹೋಗಿವೆ. ಚುನಾವಣೆಗಳಿಗೆ ಜನ ಒಪ್ಪಿದ್ದಾರೆ. ನಾವು ತಂದಿರತಕ್ಕಂತಹ ಸುಗ್ರೀವಾಜ್ಞೆಯನ್ನು ಒಪ್ಪಬೇಕೆಂಬ ಉದ್ದೇಶದಿಂದ ಈ ವಿಧೇಯಕವನ್ನು ತಂದಿದ್ದೇನೆ. ದಯವಿಟ್ಟು ಸದನ ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಹೇಳಿ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಆಳುವ ಪಕ್ಷದವರು ಆತ್ಮ ಶೋಧನೆ ಮಾಡಿಕೊಂಡು ಮಾಡಬೇಕು.

ಶ್ರೀ ವೈ. ರಾಮಕೃಷ್ಣ : ಅಧ್ಯಕ್ಷರೆ, ಇದು ಆತ್ಮ ದ್ರೋಹದ ತಿದ್ದುಪಡಿ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,

"1995ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 11 ರವರೆಗೆ

ಉಪ ಸಭಾಧ್ಯಕ್ಷರು : "ಖಂಡ 2 ರಿಂದ 11 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 11 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಉಪ ಸಭಾಧ್ಯಕ್ಷರು : ಪ್ರಸ್ತಾವ ಏನೆಂದರೆ ;

"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕರ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, 1995ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೆಕೆಂದು